ered No. M. 1393. ಲ ಪುಟ

dec-37

ಕಾಲಾಣೆ

ಕಂಠೀರವ

KANTEERAVA

KANARESE, BI-WEEKLY

ESTD. 1919 ಸ್ಥಾಪನೆ.

ಸಂಪುಟ ೨೩ | ಮಂಗಳೂರು, ೧೯೪೧ನೇ ಇಸವಿ ಸಪ್ಟೆಂಬರ ತಾರೀಕು ೧೨ನೇ ಶುಕ್ರವಾರ | ಸಂಚಿಕೆ ೪೮

VOL. XXIII | MANGALORE, FRIDAY, SEPTEMBER 12, 1941 | NO. 48

ಲೆನೆನ್‌ಗ್ರಾಡಿಗಾಗಿ ಯುದ್ಧ

• ಜರ್ಮನರ ಹಕ್ಕನ್ನು ಅಲ್ಲಗಳೆಯಲಾಗಿದೆ

ಕೇಂದ್ರ ರಂಗದಲ್ಲಿ ರಷ್ಯದ ವಿಜಯ—ಒಡೆಸದಲ್ಲಿ ವಿಮಾನಗಳು

ಜರ್ಮನರು ಲೆನೆನ್‌ಗ್ರಾಡನ್ನು ಸುತ್ತು ಹಾಕಿಲ್ಲ; ಆ ನಗರವು ಇತರ ಭಾಗಗಳಿಂದ ಕತರಿಸಲ್ಪಟ್ಟು ಒಂದೇ ಯಾಗಿ ಕಾದಾಡಲು ನಿಂತಿದೆ ಎಂಬ ಜರ್ಮನರ ಹಕ್ಕು ಸಂಪೂರ್ಣ ಅರ್ಥ ರಹಿತವಾದದ್ದು. ಜರ್ಮನರು ಮಾಸ್ಕೊ ಲೆನೆನ್‌ಗ್ರಾಡ್ ರೈಲ್ವೆಯನ್ನು ಯಾವ ಕಡೆಯಲ್ಲಿಯಾದರೂ ಮುರಿದಿದ್ದಾರೆ ಎಂಬ ಮಾತಿಗೂ ಯಾವ ಆಧಾರವೂ ದೊರಕಿಲ್ಲ.

ಜರ್ಮನರ ವಿಮಾನ ಬಲವೀಗ ವಹಿವಾಟದ ಸಾಧನಗಳನ್ನು ತುಂಡರಿಸಲು ಅಸಾಧ್ಯ ಪ್ರಯತ್ನಗಳನ್ನು ಮಾಡುತ್ತಿವೆ. ಹಳ್ಳಿಗಳಲ್ಲಿ ಭಯೋತ್ಪಾದನವನ್ನು ಉಂಟುಮಾಡಲು ಪೇಚಾಡುತ್ತಿವೆ. ಆದರೆ ಅವೆಲ್ಲ ಕುಯುಕ್ತಿಗಳಿಂದ ಲೆನೆನ್‌ಗ್ರಾಡನ್ನು ರಕ್ಷಿಸುವವರ ಸ್ಫೂರ್ತಿಯಾಗಲೀ, ನೈತಿಕ ಸ್ಥೈರ್ಯವಾಗಲೀ ಕುಂದಿ ಕುಂದುವಂತಿಲ್ಲ.

ರಷ್ಯದವರ ವಾರ್ತೆಗಳ ಮೇರೆಗೆ, "ರಷ್ಯದ ಬಲಗಳು ಶತ್ರುಗಳ ಸೇಲೆ ಬಲವಾದ ಆಘಾತ ಮಾಡಿವೆ; ಅವರ ವಿಮಾನ ನಿಲ್ದಾಣಗಳನ್ನು ಆಕ್ರಮಿಸಿ ಕಳೆದ ತಾ. ೫ರಲ್ಲಿ ೨೩ ಜರ್ಮನ್ ವಿಮಾನಗಳನ್ನು ಕೆಳಗುರುಳಿಸಿವೆ; ರಷ್ಯದವರ ೧೧ ವಿಮಾನಗಳು ಧ್ವಂಸವಾಗಿವೆ. ಜರ್ಮನರ ಒಂದು ಸಬ್‌ಮೆರೈನನ್ನು ರಷ್ಯದವರು ಪುಡಿಮಾಡಿದರು."

ಅನುತರದ, ರಷ್ಯದವರ ವಾರ್ತೆಯಲ್ಲಿ "ಕೇಂದ್ರ ರಣರಂಗಗಳಲ್ಲಿ ಶತ್ರುಗಳನ್ನು ಬಹು ದೂರ ನಾವು ಹಿಂದೆ ಸರಿಸಿದ್ದೇವೆ; ಐವತ್ತು ಯಾಂತ್ರಿಕ ಕೋವಿಗಳ ಸೆಲೆ, ೬ ಕಾರು ಮೊದಲಾದುವನ್ನು ಧ್ವಂಸಮಾಡಿದ್ದೇವೆ" ಎಂದಿದೆ.

ರಷ್ಯದ ಯಾವತ್ತು ರಣರಂಗಗಳಲ್ಲಿಯೂ ಘೋರ ಕಾದಾಟ ನಡೆಯುತ್ತಿದೆ. ರಷ್ಯದ ಗೊರಿಲ್ಲಗಳ ಸಾಹಸ ಕಾರ್ಯಗಳ ವಾರ್ತೆಗಳು ಅಲ್ಲಲ್ಲಿ ಕೇಳ ಬರುತ್ತಿವೆ. ಜರ್ಮನರೂ ಅಲ್ಲಲ್ಲಿ ತಮಗೆ ವಿಜಯವಾಗಿದೆ, ತಾವು ಮುಂದೊತ್ತುತ್ತಿದ್ದೇವೆ ಎನ್ನುತ್ತಿದ್ದಾರೆ.

ಒಡೆಸದಲ್ಲಿ ರಷ್ಯದವರಿಗೆ ಅವರ ವಿಮಾನಗಳ ಬೆಂಬಲ ಕಡಿಮೆಯಾಗಿಲ್ಲ; ಕ್ರಿಮಿಯದಿಂದ ರಷ್ಯದ ವಿಮಾನಗಳು ಒಡೆಸಕ್ಕೆ ನುಗ್ಗಿ, ಅಲ್ಲಿ ಜರ್ಮನರ ದಾಳಿಯನ್ನು ಪ್ರತಿಭಟಿಸುತ್ತಿವೆ ಎಂದು ಹೇಳಲಾಗಿದೆ.

ಲೆನೆನ್‌ಗ್ರಾಡಿನಲ್ಲಿ ಬ್ರಿಟಿಷ್ ವಿಮಾನಗಳು ಕೆಲಸ ಮಾಡತೊಡಗಿವೆ ಎಂಬುದು ವಾರ್ತೆ: ಇದನ್ನು ಲಂಡನಿನವರು ಅಲ್ಲಗಳೆದಿಲ್ಲ. ಲೆನೆನ್‌ಗ್ರಾಡಿನ ಬಳಿ ಇಂದು ವರೆಗೆ ಸುಮಾರು ೫೦೦ ನಾಜಿ ವಿಮಾನಗಳು ಪುಡಿಯಾದುವೆಂದು ಸುದ್ದಿ.

ಬರ್ಲಿನಿನ ಪ್ರಚಾರಕಾರ್ಯಕ್ಕೇನೂ ಈಗಲೂ ಬರಗಾಲವಿಲ್ಲ. ಆಗಲೇ, ಇನ್ನೇನು, ಲೆನೆನ್‌ಗ್ರಾಡ್ ತಮ್ಮ ವಶವಾಯಿತೆಂಬಂತೆ, "ಜರ್ಮನ್ ಸೇನೆಗಳು ನೇವಸ್ಕಿಯ ಬಳಿ, ಗುಂಡಿನ ಹೊಡೆತ ದೊಳಗೆ ಇದ್ದಾವೆ"ಂದು ಬರ್ಲಿನಿನವರ ಬೊಬ್ಬಾಟ.

ರಷ್ಯದವರಾದರೋ, ಅಲ್ಲಿ ಜರ್ಮನರನ್ನು ಅಡ್ಡಗಟ್ಟಿ, ಅವರ ಮುನ್ನಡೆಯನ್ನು ತಡೆದು, ಅವರ ಸೇನೆಗಳನ್ನು ಹಲ ಮೈಲಿಗಳ ವರೆಗೆ ಹಿಂದಕ್ಕಟ್ಟಿದ್ದಾರೆ.

ಈಗ ಜರ್ಮನರು ಟಾಲ್ಲಿನಿನ ಪತನದ ಬಳಿಕ, ಎಸ್ಟೋನಿಯಾ ಬಲಗಳಿಂದ ಪರಿಪುಷ್ಟರಾಗಿ ರಷ್ಯದವರನ್ನು ಆಕ್ರಮಿಸಲು ನೋಡುತ್ತಿದ್ದಾರೆ; ಆದರೆ ರಷ್ಯದ ಬಲಗಳು, ಮಾಸ್ಕೊ—ಲೆನೆನ್‌ಗ್ರಾಡ್ ರೈಲ್ವೆಯನ್ನು ಹಾಗೇ ತೆರೆದಿಟ್ಟು, ಜರ್ಮನರ ಲೆನೆನ್‌ಗ್ರಾಡಿನ ಮೇಲಿನ ಈ ಆಕ್ರಮಣವನ್ನೆಲ್ಲ ಸದ್ಯ ಆತ್ಮರಕ್ಷಣೆಯ ದೃಷ್ಟಿಯಿಂದಲೇ ಸಹಿಸಿಕೊಳ್ಳಲು ನಿರ್ಧರಿಸಿರುವೆಂದು ತಿಳಿದುಬಂದಿದೆ

ಹಿಟ್ಲರಿಗೆ ಇದುವರೆಗೆ ಪೆಟ್ಟಿನ ನಷ್ಟದ ರುಚಿ ಗೊತ್ತಿರಲಿಲ್ಲ. ಈಗ ರಷ್ಯದ ಯುದ್ಧಾರಂಭವಾದ ಮೇಲೆ, ಮುಖ್ಯವಾಗಿ ಲೆನೆನ್‌ಗ್ರಾಡಿನಂಥ ಮುಖ್ಯ ಪ್ರದೇಶಗಳ ಮೇಲೆ ಬೀಳುವ ಕಾಲದಲ್ಲಿ, ಆ ರುಚಿ ಅವನಿಗೆ ತಿಳಿಯುತ್ತ ಬರುತ್ತಿದೆ. ಆದರೆ ಮಾನವ ವರ್ಗವನ್ನೇ ಈ ಸಮರದ ಯಜ್ಞಕುಂಡದಲ್ಲಿ ನೂಕಲು ಸಂಕಲ್ಪ ಮಾಡಿರುವ ಅವನಿಗೆ, ಆ ರುಚಿ ತಿಳಿದರೂ ಜಗತ್ತಿಗೆ ವಿಶೇಷ ಪ್ರಯೋಜನವಾಗುವುದು ಕಷ್ಟ. ಧ್ವಂಸಕಾರ್ಯದಲ್ಲಿ ತನ್ನವರು, ಪರಕೀಯರೆಂಬ ದಯೆದಾಕ್ಷಿಣ್ಯವಾದರೂ ಆತನಿಗೆ ಹೇಗೆ ಹುಟ್ಟೀತು?

ಹೀಗೂ ಉಂಟು!

ಇದೊಂದು ಹಾತರಸ್ ಜಮೀನ್ದಾರರ ವೃತ್ತಾಂತ. ಅವರೊಬ್ಬರು ಕಾಂಗ್ರೆಸ್ ಮಂದಿ. ಅವರು ಯುದ್ಧ ಫಂಡಿಗೆ ವಂತಿಗೆ ಕೊಡಲು ನಿರಾಕರಿಸಿದಾಗ ನಡೆದುದೇನೆಂದು ಆಲೀಘರದ ಎಡಿಷನಲ್ ಸೆಶನ್ಸ್ ಜಜ್ಜರ ಮುಂದೆ ಒಂದು ಹೇಳಿಕೆ ಕೊಟ್ಟಿದ್ದಾರೆ. ಆ ಹೇಳಿಕೆ ಇಷ್ಟು:— ತಾನು ತನ್ನಿಂದ ಸಲ್ಲತಕ್ಕ "ರೆವಿನ್ಯೂ"ವನ್ನು ತನ್ನ ನೌಕರನ ಮೂಲಕ ಕಳುಹಿಸಿ ಕೊಟ್ಟಿ; ಆ ಮೊಬಲಗಿನಲ್ಲಿ ರೂ. ೨೪-೪-೦ನ್ನು, ಯುದ್ಧ ಫಂಡಿನ ವಂತಿಗೆಯಾಗಿ, ಕಲೆಕ್ಟರರ ಕಚೇರಿಯವರು, ಜಮೆ ಹಿಟ್ಟಿಕೊಂಡು, ಮಿಕ್ಕ ಮೊಬಲಗನ್ನು ತನ್ನ ರೆವಿನ್ಯೂ ಲೆಕ್ಕಕ್ಕೆ ಬರೆದುಕೊಂಡರು; ತಾನು ಹಾಗೆ ಬಾಕಿಯಾದ ತನ್ನ ರೆವಿನ್ಯೂವನ್ನು ತೆರಲು ಒಪ್ಪಲಿಲ್ಲ; ಮಾತ್ರವಲ್ಲ; ಇದರಲ್ಲಿ ನಡೆದುದೇನೆಂದು ಜಿಲ್ಲಾ ಕಲೆಕ್ಟರ್, ಗವರ್ನರ್ ಮತ್ತು ಕಾಂಗ್ರೆಸ್ ಕಮಿಟಿಗಳಿಗೆ ತಂತಿ ಬಿಟ್ಟಿ. ಅನಂತರ ತಾನು ಕೊಟ್ಟ ಒಂದು ಭಾಷಣದ ಸಂಬಂಧ ಪ್ರಾಸಿಕ್ಯೂಶನ್ ನಡೆದು, ಅದರಲ್ಲಿ ಆಲಿಘರದ ಜ್ಯಾಂಟ್ ಮ್ಯಾಜಿಸ್ಟ್ರೇಟರು, ೧೮ ತಿಂಗಳ ಕಠಿನ ಸಜೆ ವಿಧಿಸಿದರು ಆದಕ್ಕಾಗಿ ಈ ಅಪೀಲು. ಅಪೀಲಿನಲ್ಲಿ ಎಡಿಷನಲ್ ಜಡ್ಜರು ಅವರ ಹೇಳಿಕೆಯನ್ನು ನಂಬಿ ಅವರ ದಂಡನೆಯನ್ನು ರದ್ದು ಮಾಡಿದ್ದಾರೆ. ವೈಯಕ್ತಿಕ ಹಕ್ಕಿನ ರಕ್ಷಣೆಯ ಕಾರ್ಯದಲ್ಲಿ ಈ ಜಮೀನ್ದಾರರ ಸಾರ್ವಜನಿಕ ಸ್ಫೂರ್ತಿಗೆ ಪ್ರತಿಯಾಗಿ ಈ ಪ್ರಾಸಿಕ್ಯೂಶನ್ ಹೂಡಲಾಗಿದೆ ಎಂದು ಜಡ್ಜರು ಅಭಿಪ್ರಾಯಪಟ್ಟಿದ್ದಾರೆ.



ಬ್ರಿಟಿಶ್ ಬಲದ ಉತ್ತರದ ಸೇನಾಧಿಕಾರಿಗಳು

ಲೆಫ್ಟೆನೆಂಟ್-ಜನರಲ್ ಸರ್ ರೋನಾಲ್ ಫೋರ್ಬ್ಸ್ ಅಡಾಮ್ ಸಿ. ಬಿ., ಡಿ. ಎಸ್. ಒ., ಒ. ಬಿ. ಇ., ಸಿ. ಬ. ಸಿ-ಇನ್-ಚೀಫ್— ಇವರು, ಬ್ರಿಟಿಷ್ ಬಲದ ಉತ್ತರದ ಸೇನಾಧಿಕಾರಿಗಳು— ಇವರು ೧೯೧೪-೧೮ರಲ್ಲಿ ಫ್ರಾನ್ಸ್, ಫ್ಲಾಂಡರ್ಸ್ ಮತ್ತು ಇಟೆಲಿಗಳಲ್ಲಿ ಕೆಲಸಮಾಡಿ ಬಿರುದುಗಳನ್ನು ಪಡದಿದ್ದಾರೆ.

ಕರ್ಣಾಟಕ ಯಕ್ಷಗಾನ ಸೇವಾಸಂಘ, ಶಿವಮೊಗ್ಗ

ಈ ಸಂಘದವರು, ಶಿವಮೊಗ್ಗ ದೊಡ್ಡಪೇಟೆ ಬಸವಣ್ಣ ದೇವಸ್ಥಾನದ ಮಹಡಿಯ ಮೇಲೆ, ಶ್ರೀಪೇಟೆ ಸಿದ್ಧಿವಿನಾಯಕ ದೇವರ ಸನ್ನಿಧಿಯಲ್ಲಿ ಕಳೆದ ತಾ. ೩೦ನೇ ರಾತ್ರೆ ಭೀಷ್ಮಾಕ್ಷಿ ಕಲ್ಯಾಣವೆಂಬ ಕಥೆಯನ್ನು ಯಕ್ಷಗಾನ ರೂಪವಾಗಿ ಆಡಿ ಪ್ರೇಕ್ಷಕರ ಮನಸ್ಸನ್ನು ಸಂತೋಷಗೊಳಿಸಿದರು. ಪ್ರೇಕ್ಷಕರೂ ಸಂಘದವರೂ ಕಿಕ್ಕಿರಿಯುವಂತೆ ನೆರೆದಿದ್ದರು. ಶ್ರೀಗಳಾದ ಧನ್ಯ ಅನಂತರಾಮಯ್ಯನವರು, ಭಾಗವತರು; ಕೆ. ನಾರಾಯಣರಾವ್, ಭೀಷ್ಮಾಕ್ಷಿ ಪಾತ್ರ; ಶೀತಾರಾಮು ಹೆಬ್ಬಾರ್ ಪದ್ಮಗಂಧಿ ಪಾತ್ರ ವಹಿಸಿದ್ದರು. ಹಾರತುರಾಯಿ ತಾಂಬೂಲಗಳನ್ನು ಹಂಚಿದ ನಂತರ ಶ್ರೀ ಸಿದ್ಧಿವಿನಾಯಕನಿಗೆ ಮಂಗಳಾರತಿಯಿಂದ ಸಭೆಯು ಮುಕ್ತಾಯವಾಯಿತು.

ಫಿನ್‌ಲ್ಯಾಂಡ್

ವೀಪುರಿಯನ್ನು ಹಿಡಿದುದಾಯಿತು; ಕಾರ್ಲಿಯನ್ ಇಸ್ತ್ಮಸ್‌ನಿಂದ ರಷ್ಯದವರು ಹಿಂದೆಗೆದಾಯಿತು–ಇನ್ನು ನಮ್ಮ ಹಳೆಯ ಗಡಿಗಳು ನಮಗೆ ಸಿಕ್ಕಿದರೆ ಸಾಕು, ರಷ್ಯದೊಡನೆ ರಾಜಿಯಾಗೋಣ ವೆಂದು ಯುದ್ಧದಿಂದ ದಣಿದ ಫಿನ್ನರ ಅಭಿಲಾಷೆಯಾದರೂ, ಜರ್ಮನರ ಪರ ವಾಗಿರುವ ಮನ್ನರ್‌ಹಿಂ ಮೊದಲಾದ ಫಿನ್ ಮುಖಂಡರು ರಷ್ಯದ ಕೊನೆಯ ಅಪಜಯದ ವರೆಗೂ ಫಿನ್ನರು ಕಾದಾ ಡಲೇಬೇಕು ಎಂದು ಹಟ ಹಿಡಿದಿದ್ದಾರೆ.

ಇತ್ತ ಜರ್ಮನರು ಫಿನ್ನರಲ್ಲಿ ಅಂಥ ಪ್ರತ್ಯೇಕ ಸಂಧಿಯ ಹಾರೈಕೆಯೇ ಇಲ್ಲ ವೆಂದು ಸಾರುತ್ತಿದ್ದಾರೆ. ಇದಕ್ಕೆ ಕಾರಣವಿದೆ. ಫಿನ್ನರು ರಷ್ಯದ ರಣರಂಗ ದಿಂದ ಹಿಂದೆ ಸರಿಯುವುದು ಜರ್ಮನಿಗೆ ಸುತಾರಾಂ ಇಷ್ಟವಿಲ್ಲ. ಒಂದು ವೇಳೆ, ಫಿನ್ನರು ಹಾಗೆ ಮಾಡುವುದಾದರೆ, ಜರ್ಮನಿ ತನ್ನ "ಹೊಸ ವ್ಯವಸ್ಥೆ"ಗೆ ಫಿನ್‌ಲ್ಯಾಂಡ್ ಸೇರಲೇಬೇಕೆಂಬ ಹೊಸ ತಂತ್ರ ಹೂಡಿ ಫಿನ್‌ಲ್ಯಾಂಡನ್ನು ಕಟ್ಟಿ ಹಾಕಲು ಯತ್ನಿಸದಿರುವುದಿಲ್ಲ.

ಫಿನ್ನರ ನಿಜವಾದ ಮನೋಗತವೂ, ಆ ಮನೋಗತವನ್ನು ನೆರವೇರಿಸುವಲ್ಲಿ ಇರುವ ಸಂದಿಗ್ಧಗಳೂ ಬ್ರಿಟನಿಗೂ, ರಷ್ಯಕ್ಕೂ ತಿಳಿಯದೆ ಇಲ್ಲ. ಆದುದರಿಂ ದಲೇ ರಷ್ಯದವರು, ಫಿನ್ನರ ವಿಷಯದಲ್ಲಿ ಶಾಂತಭಾವವನ್ನೀಗ ಪ್ರಕಟಪಡಿಸಿದ್ದಾರೆ. ಇದು ಅವರ ಮೇಲೆ ಸತ್ಪರಿಣಾಮವನ್ನು ಉಂಟುಮಾಡಿದೆ ಎಂಬುದರಲ್ಲಿ ಅನು ಮಾನವಿಲ್ಲ. ಏವಂಜ ಫಿನ್ನರು ತಮ್ಮ ಸಾರ್ವಜನಿಕ ಕಾರ್ಯನೀತಿಯ ಕುರಿತು, ತಮ್ಮ ಭಾವವನ್ನು ಹೇಗೆ ಪ್ರಕಟಿಸುವ ರೆಂಬುದರ ಮೇಲೇ ಎಲ್ಲವೂ,–ಮುಂದಿನ ವಿದ್ಯಮಾನಗಳೆಲ್ಲವೂ–ಹೊಂದಿಕೊಂಡಿವೆ. ಬ್ರಿಟನ್–ರಷ್ಯಗಳಂತೂ, ಈ ಸಂಧಿಯ ಮಾರ್ಗದಲ್ಲಿರುವ ಯಾವತ್ತು ತೊಡಕು ಗಳನ್ನೂ ಪರಿಹರಿಸುವಲ್ಲಿ ತಕ್ಕ ಸಹಾಯ ವನ್ನು ಫಿನ್‌ಲ್ಯಾಂಡಿಗೆ ನೀಡಲು ಆಗಿ ನಿಂದಲೂ ಸಿದ್ಧವಾಗಿಯೇ ನಿಂತಿವೆ.

ರಷ್ಯದ ಚಳಿಗಾಲದಲ್ಲಿ ಜರ್ಮನ್ ವಿಮಾನಬಲದ ಸಮಸ್ಯೆ

ರಷ್ಯದ ಪೂರ್ವ ರಂಗದಲ್ಲಿ ಮಳೆ, ಹಿಮ, ಕಣ್ಣು ಮುಸಕಿನ ಪರಿಸ್ಥಿತಿಗಳುಂ ಟಾಗುವಾಗ, ಜರ್ಮನ್ ವಿಮಾನಬಲ ಗಳಿಗೊದಗುವ ಕಷ್ಟ ಪರಂಪರೆಗಳು ಅಷ್ಟಿ ಷ್ಟಲ್ಲ. ಅಲ್ಲಿನ ಚಳಿಗಾಲವು, ವಿಮಾನ ಬಲವನ್ನು ಕಾಪಾಡಿಕೊಳ್ಳುವ ಕೆಲಸ ವನ್ನು ಬಹಳ ಕಠಿನವಾಗಿ ಮಾಡಿಡು ವುದು. ಈಗ ಜರ್ಮನ್ ವಿಮಾನಗಳು ಉಪಯೋಗಿಸಿಕೊಳ್ಳುತ್ತಿರುವ ರಷ್ಯದ ತಾತ್ಕಾಲಿಕ ವಿಮಾನ ನಿಲ್ದಾಣಗಳು, ಸಾಮಾನ್ಯವಾಗಿಯೇ ಇದ್ದು, ಮಳೆ ಬಂದೊಡನೆಯೇ ಕೆಸರಿನ ಮುದ್ದೆಯಾಗು ವುವು. ಹಾಗಾಗಿ ಅವುಗಳನ್ನು ಗಟ್ಟಿ ಮಾಡಬೇಕಾದರೆ ಈಗಿನಿಂದಲೇ ಬಹಳ ಕೆಲಸ ಮಾಡಬೇಕಾಗುವುದು.

ಚಳಿಗಾಲದಲ್ಲಿ ಯಂತ್ರಗಳನ್ನು ಬೆಚ್ಚ ಗಿರಿಸುವಂತೆ ಮಾಡಬೇಕಾಗಿದೆ; ಮತ್ತೆ

ಬ್ರಿಟನಿನ ಹೊಸ ವಿಮಾನ ತರಬೇತಿ ಮುಖಂಡರು

ಎಯರ್ ಮಾರ್ಶಲ್ ಎ. ಜಿ. ಆರ್. ಗಾರೋಡ್ ಇವರು, ತರಬೇತಿಯ ಮುಖಂಡರು. ಈ ದಳ ದಲ್ಲಿ ವಿಮಾನದ ಕರ್ತವ್ಯ ಸಾಗಿಸುವಂತೆ ೧೬ ವರ್ಷದ ಬ್ರಿಟಿಷ್ ಬಾಲಕನಿಗೂ, ವಿಮಾನವಿದ್ಯೆ ಯನ್ನು ಪಡೆಯುವ ಅವಕಾಶವಿದೆ.

ಅವುಗಳನ್ನು ಕಾರ್ಯಾಚರಣೆಗೆ ತರು ವಲ್ಲಿ ಇರುವ ಪ್ರಯತ್ನಾಸವೂ ಅಪಾರವೇ. ಈಗಾಗಲೇ ನಾಜಿಗಳು ರಷ್ಯದಲ್ಲಿ ಆಕ್ರ ಮಿಸಿರುವ ಪ್ರದೇಶಗಳಲ್ಲಿ, ರಸ್ತೆಗಳ ದುರ ವಸ್ಥೆಯಿಂದ, ಜರ್ಮನ್ ವಿಮಾನಗಳಿಗೆ ಸೌದೆಯನ್ನು ಉಪಯೋಗಿಸುವುದು ಕಷ್ಟ ವಾಗಿದೆ ಅನ್ನುವಾಗ, ಮುಂದಿನ ವ್ಯವಸ್ಥೆ ಗಳಲ್ಲಿ ಜರ್ಮನರ ಕೈ ಕಟ್ಟೇತೆಂಬುದು ನಿರ್ವಿವಾದ.

ಟರ್ಕಿಗೆ ಜರ್ಮನರ ಹೊಸ ಒತ್ತಾಯವೇ?

ಟರ್ಕಿಗೆ ಜರ್ಮನಿ ತಿರುಗಿ ಒತ್ತಾ ಯಿಸುತ್ತಿದೆ ಎಂಬ ಹೊಸ ವಾರ್ತೆ ಹೊರ ಟಿದೆ. ಹಿಟ್ಲರ್–ಮುಸಲೊನಿ ಭೇಟಿ ಎಂದರೆ, ಹಲವು ವೇಳೆ, ಹೊಸದೇನೋ ಎಲಿಟರಿ ಸಾಹಸದ ಯೋಜನೆ ಎಂದು ಅರ್ಥ ಮಾಡಬೇಕಾಗುತ್ತಿದೆ. ಅಷ್ಟೇ ಅಲ್ಲದೆ, ಹಿಟ್ಲರ್ ವಾನ್ ಪೇಪನರನ್ನು ಟರ್ಕಿಯಿಂದ ತನ್ನ ಹೆಡ್‌ಕ್ವಾರ್ಟರ್ಸಿಗೆ ಕರೆಸಿಕೊಂಡುದೂ ಒತ್ತಾಯದ ವಿಚಾ ರದ ಒಂದು ಸೂಚನೆಯೇ ಎಂದೂ ಭಾವಿಸಬೇಕಾಗಿದೆ. ಆದರೆ ಈ ಒತ್ತಾ ಯದ ಸೂಚನೆ ನಡೆಯುವುದು ಕಷ್ಟ. ಕಾರಣ ಟರ್ಕಿ ಕೌಕಸಸ್ಸಿಗೆ ಸುಲಭದಲ್ಲಿ ಹಾದಿ ಮಾಡಿಕೊಟ್ಟರೆ, ಆಗ ಅಕಸ್ಮಾ ತಾದ ಎಲಿಟರಿ ಆಕ್ರಮಣಕ್ಕೆ ಅವಕಾಶ ವಾಗುವುದಾದರೂ, ಅದು ಇದೊಂದು ರೀತಿಯ ತೊಂದರೆಯುಳ್ಳುದಾಗಿದೆ. ಮೊದಲನೆಯದಾಗಿ ಅದು ಜಗತ್ತಿನಲ್ಲೆಲ್ಲ ದುರ್ಗಮವಾದ ಪರ್ವತ ಪ್ರದೇಶಗಳ ಹಾದಿಯಾಗಿದ್ದು, ಅದರೊಂದಿಗೆ ಅದರ ಸಮೀಪದ ಸೀರಿಯಾ, ಇರಾಕ್, ಇರಾ ನುಗಳು ಬ್ರಿಟಿಷರ ಕೈಯಲ್ಲಿರುವುದರಿಂದ, ಟರ್ಕಿ ಪ್ರಾಯಶಃ ಅಲ್ಲಿ ಚೆನ್ನಾಗಿಯುದ್ಧ ಮಾಡುವುದೇ ಸಂಭವ; ಸುಲಭದಲ್ಲಿ ಹಾದಿ ಮಾಡಿಕೊಡುವುದು ಅಸಂಭವ.

ಕೆಲವು ವಾರಗಳ ಹಿಂದೆ, ಕೌಕಸಸಿನ ಮಾರ್ಗ ತಮಗೆ ಸುಲಭವಾಗಿ ದೊರಕೀ ತೆಂದು ನಾಜಿಗಳು ನಿರೀಕ್ಷಿಸುತ್ತಿದ್ದರು. ಆಗ ನಾಜಿಗಳು, ಅಷ್ಟರಲ್ಲೇ ಬಾಕು ಮತ್ತು ಬಾಟಮ್‌ಗಳಲ್ಲಿ ತುಂಬಿಕೊಳ್ಳ ಬಹುದೆಂದು ಹಾರೈಸಿದ್ದ ತಮ್ಮ ಸೈನ್ಯ ಗಳಿಗಾಗಿ ಸರಬರಾಯಿಯನ್ನು ಅತ್ತ



ಶ್ವಾಸಕೋಶದ ಬಾಧೆಗಳನ್ನು ದೂರವಾಗಿರಿಸಿ

ನೀವು ಚಳಿಯಿಂದ ಬೇಗನೇ ಬಾಧಿತರಾಗುವಿರಾ? ದೀರ್ಘಕಾಲದ ಕೆಮ್ಮಿನ ಬಾಧೆಗಳಿಂದ ಯಾ ಶ್ವಾಸಕೋಶಗಳನ್ನು ನಿರ್ಬಲಗೊಳಿಸುವ ಶೀತದಿಂದ ನೀವು ಬೇಸರಗೊಂಡಿರುವಿರಾ? ಹಾಗಾದರೆ ಪೆಪ್ಸ್ ವಿಷಹಾರಕ ಶ್ವಾಸನೀಯ ಬಿಲ್ಲೆಗಳ ಸೇವನೆಯಿಂದ ನೀವು ಆಶ್ಚರ್ಯಕರವಾದ ಪ್ರಯೋಜನವನ್ನು ಹೊಂದುವಿರಿ.

ಬಾಯಲ್ಲಿ ಕರಗಿ ಪೆಪ್ಸ್ ಸಮೃದ್ಧವಾದ ಔಷಧೀಯ ಸಾರಗಳನ್ನು ಹೊರ ಸೂಸುತ್ತಿದ್ದು ಇವು ನಿಮ್ಮ ಶ್ವಾಸದೊಡನೆ ಸೇರಿ, ನಿಮ್ಮ ಶ್ವಾಸಕೋಶಗಳೊಳಗೆ ಆಳವಾಗಿ ಸೇರುತ್ತವೆ ಹೀಗಾಗಿ ಪೆಪ್ಸ್ ಬಾಧಾಕಾರಿ ಕ್ರಿಮಿಗಳನ್ನು ನಾಶಗೊಳಿಸಿ, ಬಾತುವಿಕೆಯನ್ನೂ ಒತ್ತಾಟವನ್ನೂ ಕಡಮೆಗೊಳಿಸಿ. ಕೆಮ್ಮು, ಶೀತ, ಚಳಿ ಮತ್ತು ಗಂಟಲುಬಾಧೆಗಳನ್ನೂ, ಶ್ವಾಸಕೋಶ ಬಾಧೆ, ಗೂರಲು, ಫ್ಲೂ, ನಿವಾರಿಸುತ್ತದೆ ಎಲ್ಲಾ ಔಷಧಿ ವ್ಯಾಪಾರಿಗಳೂ ಪೆಪ್ಸ್ ಒಂದು ರೂಪಾಯಿನಂತೆ ಬಿಕರಿ ಮಾಡುತ್ತಾರೆ.

ಏಜಂಟರು:–ಮೆಸರ್ಸ್ ದಾಧಾ ಎಂಡ್ ಕೊ., ಪಿ. ಟಿ. ಮದ್ರಾಸು.

ಪೆಪ್ಸ್ ಸೇವಿಸಿ

PEPS

ವಿಷಹಾರಕ ಶ್ವಾಸನೀಯ ಬಿಲ್ಲೆಗಳು.

ಸಾಗಿಸಲು, "ನಿಮ್ಮಲ್ಲಿ ಸ್ವಲ್ಪ ದಾರಿ ಕೊಡಿ" ಎಂದು ಟರ್ಕಿಯನ್ನು ಪ್ರೇರೇಪಿಸಲು ಪ್ರಯತ್ನಿಸಿದ್ದರು. ಆದರೆ ಆ ಯೋಜನೆಯು ಕೆಲ ಮಟ್ಟಿಗೆ ವಿಫಲವಾದುದರಿಂದ, ಅದೇ ರೀತಿಯಲ್ಲಿ ಇನ್ನೂ ಟರ್ಕಿಯನ್ನು ಪ್ರೇರೇಪಿಸುವುದು ಫಲವಿಲ್ಲವೆಂದು ಮನಗಂಡಿರುವ ನಾಜಿಗಳು ಮುಂದೆ ಟರ್ಕಿಯನ್ನು ಒತ್ತಾಯ ಪಡಿಸಲು ಬೇರೆ ಉಪಾಯಗಳನ್ನು ಕಂಡು ಹಿಡಿಯುವರೆಂಬುದು ನಿಜ.

ಸಾಲಿಗ್ರಾಮ

ಕಳೆದ ವಾರ ಇಲ್ಲಿಯ ಬ್ರಾಹ್ಮಣ ಹೆಂಗುಸೊಂದನ್ನು ಯಾರೊ ಕೈಕಾಲು ಮುರಿಯುವಂತೆ ಹೊಡೆದು ವಿಪರೀತಾ ವಸ್ಥೆಗೆ ತಂದಿದ್ದಾರೆ. ವಿಚಾರಣೆ ನಡೆ ಯುತ್ತಿದೆ.

ಸ್ವೀಕಾರ

ಅರಕ್ಷಣೀಯಃ—ಬೆಲೆ: ಹನ್ನೆರಡಾಣೆ–ಪುಸ್ತಕ ದೊರೆಯುವ ಸ್ಥಳ: ಸತ್ಯ ಶೋಧನ ಪುಸ್ತಕ ಭಂಡಾರ, ಕೋಟಿ, ಬೆಂಗಳೂರು ನಗರ. ಇದು "ಶರತ್ ಸಾಹಿತ್ಯ" ಮಾಲೆಯ ಮೂರನೆಯ ಪುಸ್ತಕ. ಮೂಲ ಲೇಖಕರು: ದಿವಂಗತ ಡಾ। ಶರಚ್ಚಂದ್ರ ಚಟ್ಟೋಪಾಧ್ಯಾಯರು. ಅನುವಾದಕರು: ಶ್ರೀ। ಸಿ. ಕೆ. ನಾಗರಾಜರಾವ್. ಶರಚ್ಚಂದ್ರರ ಕೃತಿಗಳೆಂದರೆ, ಅವುಗಳಲ್ಲಿ ಎಷ್ಟೊಂದು ರುಚಿಯಿದೆಯೆಂದು ಹೇಳಬೇಕಾಗಿಲ್ಲ. ಅಂಥ ಲೇಖಕವರ್ಯರ ಕೃತಿಗಳನ್ನು ಅನುವಾದಿಸಿ ಕನ್ನಡಿಗರ ಮುಂದಿಡಲು 'ಶರತ್ ಸಾಹಿತ್ಯ'ದವರು ಕೈಗೊಂಡಿರುವ ಈ ಕಾರ್ಯವು ಸ್ತುತ್ಯರ್ಹವಾಗಿದೆ. ಅನುವಾದಿಸುವಲ್ಲಿ ಮೂಲ ಕಥಾವಸ್ತು ವಿನ ಧಾಟಿಯನ್ನೇ ಹಿಡಿದು ಅದರಲ್ಲಿನ ವಿಷಯಗಳೆಲ್ಲಾ ಮನದಟ್ಟಾಗುವಂತೆ ಪ್ರಯತ್ನವಹಿಡಲಾಗಿದೆ. ಕನ್ನಡಿಗರ ಪ್ರೋತ್ಸಹದಿಂದ ಈ ಸಾಹಿತ್ಯ ಮಾಲೆಯು ಬೆಳೆಯಲಿ.

NOTICE

In the Court of the District Munsiff of Mangalore.

O. S. No. 113/1941.

BETWEEN:—

Marian D'Souza— **Plaintiff**

and

Joachim Albert Tauro & others

—**Defendants**

To

2nd Defendant:—Suphine D'Souza Bai-widow of Duming Rosario Tauro of Kankanady Mangalore Taluk.

Notice is hereby given that the above suit has been filed by the Plaintiff against the Defendants for the recovery of Rs. 357—15—0 being the amount due to Plaintiff in respect of two mortgages dated 4—1—1937 and 23—6—1939 etc. with future interest and costs of suit; and that the said suit stands posted to 22—9—1941 before the above-mentioned Court. If the 2nd Defendant aforesaid fails to appear before the Court either in person or by pleader on the said date, the suit will be decided in her absence.

C. L. Lobo,
Vakil for Plaintiff.

Mangalore, 6—9—1941.

ವಿದೇಶ

ೀ ಮಿತ್ರಮಂಡಲದ ಪತ್ರ

ನಿನಲ್ಲಿ ಇನ್ನೂ ಇರುವ ನಾಜಿ
ಮತ್ತು ಪಂಜಮು ದಳದವರ
ಿ, ಬ್ರಿಟಿಷ್ ಮತ್ತು ರಷ್ಯದವರು
ಸರಕಾರಕ್ಕೊಂದು ಪತ್ರ ಬರೆ
ು. ಇರಾನ್ ಸರಕಾರ ಇನ್ನೂ
ಿಯದಲ್ಲಿ ವಿಳಂಬಿಸಬಾರದೆಂದು
ದ ಮೆತಲಬು ಅಂತೆ. ಇದಕ್ಕೆ
ನ ಉತ್ತರವನ್ನು ಬೇಗನೆ ಹಾರೈ
ದೆ. ಇತ್ತ ಇರಾನಿನಿಂದ ಜರ್ಮ
ತಪ್ಪಿಸಿಕೊಂಡು ಹೋಗದಂತೆ
ಾಗಿ ನೋಡಿಕೊಳ್ಳಲಾಗುತ್ತಿದೆ.

ಜರ್ಮನರ ಹುಡುಕೋಣವೂ
ುತ್ತಿದೆ.

ರ್ಗಿನಿನ ಮೇಲೆ ಬ್ರಿಟಿಷ್ ವಿಮಾನೆ ದಾಳಿ

ರ್ಲಿನಿನ ಮೇಲೆ ನೂರಾರು
ಷ್ ವಿಮಾನಗಳು ಈಚೆಗೆ ಹಾರಾಡಿ,
ು ಸುರಿಸಿ ಅನರ್ಥ ಮಾಡಿರುವುವು.
ಆ ಬೆಳದಿಂಗಳಲ್ಲಿ ಈ ಬಾಂಬು
ನ ಉಟಾದ ಪ್ರಚಂಡ ಬೆಂಕಿ
ಾನಿಕರಿಗೆ ಸ್ಪಷ್ಟವಾಗಿ ಕಂಡುಬರು
ತ್ತಿತ್ತು. ಬರ್ಲಿನ್ ನಗರದಲ್ಲಿ ವಿಶೇಷ
ವಾದ ಗಾಸಿಯಾಗಿರಬೇಕೆಂದು ನಂಬ
ಲಾಗಿದೆ. ಇದೊಂದು ದಾ ಖ ಲೆಯ
ದಾಳಿ. ಕೇವಿನ ಪ್ಲೇಲೆಯೂ ಈ ವಿಮಾನ
ಗಳ ಉತ್ಪಾತ ದಾಳಿ ನಡೆದಿದೆ.

ಇಟಲಿ ಟ್ಯಾಂಕರ್ ಮುಳುಗಿಸಲ್ಪಟ್ಟಿತು

ಈಜಿಯನ್ ನಲ್ಲಿ ಒಂದು ಇಟಲಿಯ
ಟ್ಯಾಂಕರನ್ನು ಒಂದು ಬ್ರಿಟಿಷ್ ಸಬ್
ಮೈರೆನ್ ಮುಳುಗಿಸಿದುದು ನಿಜವೆಂದು
ಈಗ ಖಚಿತವಾದ ವಾರ್ತೆ ಬಂದಿದೆ.

ಲೆನಿನ್‌ಗ್ರಾಡನ್ನು ಜರ್ಮನರು ಸುತ್ತುಕಟ್ಟಿಲ್ಲ

ಲೆನಿನ್‌ಗ್ರಾಡ್ ಕ್ಷೇತ್ರದಲ್ಲಿ ಭಾರೀ
ಯುದ್ಧವಾಗುತ್ತಿದೆ; ಜರ್ಮನರು ಅದನ್ನು
ಸುತ್ತುಗಟ್ಟಿಲ್ಲ. ಅ ವ ರು ದಕ್ಷಿಣ
ಪಶ್ಚಿಮಗಳಿಂದ ಮುಂದಕ್ಕೆ ಬರುತಿದ್ದಾ
ರಷ್ಟೆ. ಜರ್ಮನರು ನೀವಾದ ಬಳಿಗೆ
ಬಂದಿರುವರೆಂದೂ, ಲೇಕ್ ಎಷೋಗದ
ಬಳಿಯ ಒಂದು ನಗರವನ್ನು ಹಿಡಿದಿರು
ವರೆಂದೂ ಹೇಳಲಾಗಿದೆಯಲ್ಲದೆ ಫಿನ್ನರು
ಏರ್ ಕಾಲಿವೆಯ ಕಡೆಗೆ ಮುಂದೆ ನುಗ್ಗು
ತ್ತಿರುವರೆಂದೂ ತಿಳಿದುಬಂದಿದೆ. ಮಾಸ್ಕೋ
ವಿನ ಮೇಲಿನ ನಾಜಿಗಳ ವಿಮಾನ ದಾಳಿ
ವ್ಯರ್ಥವಾಗಿದೆ.

ಸೊವ್‌ಲೆನಸ್ಕದ ಬಳಿ ರಷ್ಯದವರ ವಿಜಯ

ಯಲ್ನಾಕ್ಕೆ ನಗರಕ್ಕಾಗಿ ೨೬ ದಿನ
ಗಳ ವರೆಗೆ ರಷ್ಯದ ಬಲಗಳಿಗೂ,
ಜರ್ಮನ್ ಸೇನೆಗಳಿಗೂ ಭಾರೀ
ಕಾದಾಟ ನಡೆದು, ಸೊವ್‌ಲೆನಸ್ಕದ
ಬಳಿಯ ಆ ನಗರವನ್ನು ರಷ್ಯದವರು
ತಿರುಗಿ ವಶಮಾಡಿಕೊಂಡರಲ್ಲದೆ ಜರ್ಮ
ನರ ೮ ಡಿವಿಜನುಗಳನ್ನು ಸಂಪೂರ್ಣ
ವಾಗಿ ಧ್ವಂಸಮಾಡಿಯೂ ಇರುವರು.

ಚೀನದಲ್ಲಿ ಜಪಾನರ ಗುಪ್ತ ಚಲನವಲನ

ಜಪಾನರು ಚೀನದ ಇನ್ನೂ ಕೆಲವು
ಬಂದರ, ನಗರಗಳಿಂದ ತಮ್ಮ ಸೇನೆ
ಗಳನ್ನು ಹಿಂದೆಗೆಯುವರೆಂದು ವಾರ್ತೆ.
ಸದ್ಯವೇ ಅವರು ಮಿಂಗೋ, ಸ್ವಾಟೌ
ಮತ್ತು ನಾನ್‌ಜಂಗ್ ನ ಗ ರ ದಿಂ ದ
ಒಕ್ಕಲು ತೆಗೆಯಬಹುದಾಗಿ ಚೀನೀಯರ
ನಿರೀಕ್ಷೆ. ಚೀನೀಯರು ದೊಡ್ಡದೊಂದು
ಪ್ರತಿ ಆಕ್ರಮಣವನ್ನು ಹೂಡಬಹುದೆಂಬ
ಅಂದಾಜಿನಿಂದ, ರಕ್ಷಣೆಯ ಕ್ಷೇತ್ರದ
ವಿಸ್ತಾರವನ್ನು ಕಡಿಮೆಮಾಡಿಕೊಳ್ಳಲು
ಜಪಾನೀಯರದೀ ಉ ಪಾ ಯ ವೆಂದು
ಹೇಳಲಾಗಿದೆ.

ಸ್ವಿಟ್ಸ್‌ಬರ್ಗೆನ್‌ನಲ್ಲಿ ಮಿತ್ರರ ಸೇನೆಗಳು

ಜರ್ಮನರು ಕಲ್ಲಿದ್ದಲಿನ ಗಣಿಗಳಿಂದ
ಕಲ್ಲಿದ್ದಲನ್ನು ಧಾರಾಳವಾಗಿ ಅಪಹರಿಸಿ
ಉಪಯೋಗಿಸಿಕೊಳ್ಳದಂತೆ, ಮಿತ್ರ ಸೇನೆ
ಗಳು ಆರ್ಕಟಿಕ್ ಸಾಗರದ ದ್ವೀಪವಾದ
ಸ್ವಿಟ್ಸ್‌ಬರ್ಗೆನ್‌ನಲ್ಲಿ ಬಂದಿಳಿದಿರುವುವು.
ಇದು ಆ ಸಾಗರದಲ್ಲಿರುವ ನಾರ್ವೆಯ
ಒಂದು ದ್ವೀಪ. ಸಮೃದ್ಧವಾದ ಕಲ್ಲಿ
ದ್ದಲು ಉಳ್ಳದು; ಒಂದು ಉತ್ತಮ
ವಿಮಾನ ನಿಲ್ದಾಣ.

ಅಮೆರಿಕದ ಫ್ಲೈಟರು ಮುಳುಗಿಸಲ್ಪಟ್ಟಿತು

ಅ ಮೆ ರಿ ಕ ದ ಫ್ಲೈಟರು "ಸ್ಟೀಲ್
ಸಿಫೇರ್ರ್" ಒಂದು ವಿಮಾನದ ಬಾಂಬಿ
ನಿಂದ ಮುಳುಗಿಸಲ್ಪಟ್ಟಿದೆ. ಇದು ಕೆರಿಬ
ಸಮುದ್ರದಲ್ಲಿ. ಆ ವಿಮಾನವು ಯಾವ
ಜನಾಂಗದೆಂದು ತಿಳಿದಿಲ್ಲ.

ಟರ್ಕಿ ಜರ್ಮನಿಗಳ ವ್ಯಾಪಾರದ ಮಾತುಕಥೆ

ಇವೆರಡು ರಾಷ್ಟ್ರಗಳೊಳಗೆ ವ್ಯಾಪಾ
ರದ ಮಾತುಕಥೆಗಳು ಅಂಕಾರದಲ್ಲಿ ಇಷ್ಟ
ರಲ್ಲೇ ಆರಂಭವಾಗಲಿದೆ.


ಅವನು ಡಾಕ್ಟರ ಸಲಹೆಯನ್ನು ಅನುಸರಿಸಿದನು
ಹಾ! ಬೆಳಗಾಯಿತು— ಎಷ್ಟು ಬಳಲಿಕೆಯಾಗಿದೆ— ರಾತ್ರಿಯ ನಿದ್ರೆಯಿಂದ ಯಾವ ಉಪಯೋಗವೂ ಆಗಲಿಲ್ಲ. ನಾನು ಕೆಲಸಕ್ಕೆ ಹೇಗೆ ಹೋಗಲಿ? ಯಾವಾಗಲೂ ಯಾಕೆ ಬಳಲಿಕೆಯಾಗಿರುತ್ತದೆ?
ನನಗೆ ಈ ದಿನ ಊಟವಾಡುವುದಕ್ಕೆ ಇಚ್ಛೆಯೇ ಇಲ್ಲ. ತೆಗೆದುಕೊಂಡು ಹೋಗು
ಈಗ ಕೆಲವು ದಿನಗಳಾಗಿ ನಿಮಗೆ ಹಸಿವೇ ಇರುವುದಿಲ್ಲ. ಯಾವಾಗಲೂ ಬಳಲಿ ಬೆಂಡಾಗಿರುತ್ತೀರಿ
ಈ ತರಹ ಕೆಲಸ ನಮ್ಮಲ್ಲಿ ಸಾಗುವುದಿಲ್ಲ. ನೀನು ಯಾವಾಗಲೂ ಬಳಲಿರುವುದರಿಂದ ನಿನ್ನ ಕೆಲಸ ಕೆಡುತ್ತಿದೆ. ನೀನು ಡಾಕ್ಟರನ್ನು ಯಾಕೆ ಹೋಗಿ ನೋಡಕೂಡದು
ಹಾರಿಯೇ! ಅವನು ಡಾಕ್ಟರಲ್ಲಿ ಹೋದನು
..... ಮತ್ತೆ, ಡಾಕ್ಟರೇ ನಾನು ರಾತ್ರಿ ನಿದ್ರೆ ಮಾಡಿ ಏಳುವಾಗಕೂಡ ಬಳಲಿಕೆಯಾಗಿರುತ್ತದೆ
ಓಹೋ! ನೀವು ಹಗಲಿನಲ್ಲಿ ವ್ಯಯಮಾಡುವ ಚೈತನ್ಯವನ್ನು ರಾತ್ರಿ ಸಂಗ್ರಹಿಸುವುದಿಲ್ಲ. "ಪ್ರಾತಃಕಾಲ ದೌರ್ಬಲ್ಯ"ವೇ ಇದಕ್ಕೆ ಕಾರಣ. ರಾತ್ರಿಯಲ್ಲಿ ಮಲಗುವಾಗ ಹಾರ್ಲಿಕ್ಸ್ ತೆಗೆದುಕೊಂಡರೆ ಅನೇಕ ರೋಗಿಗಳ ಅನುಭವದಂತೆ ಅದು ನಿಮಗೆ ಚೈತನ್ಯವನ್ನು ಒಟ್ಟುಮಾಡುವುದು. ಬೇಗನೇ ನೀವು ಶಕ್ತಿವಂತರಾಗುವಿರಿ
ಪ್ರಾತಃಕಾಲದ ದೌರ್ಬಲ್ಯದಿಂದ ನೋವನ್ನುಂಟುಮಾಡುವುದು
ಅವನಿಗೆ ಹರ್ಷವು ಉಂಟಾಗುವುದು
ನೀವು ಮಾಡಲು ಇಷ್ಟಪಟ್ಟ ಕೆಲಸವನ್ನು ಮಾಡಲು ಉತ್ಸಾಹವಿಲ್ಲದಿರುವಾಗ
ನಾನು ಡಾಕ್ಟರನ್ನು ನೋಡಿ ಅವರ ಹೇಳಿಕೆಯಂತೆ ಹಾರ್ಲಿಕ್ಸ್‌ನ್ನು ಸೇವಿಸಲು ಪುರುಮಾಡಿದ ದಿವಸವು ಎಂಥ ಸುದಿನವು
ಹಾರ್ಲಿಕ್ಸ್ ಸೇವಕರ ನೂರಾರು ಪ್ರಶಂಸರ ನಮಸ್ಕಾರಗಳನ್ನು ನಾವು ಪ್ರತಿದಿನವೂ ಪಡೆಯುತ್ತಿರುವುದರಿಂದ ಅಲಸಿಕೆಯನ್ನು ನಿವಾರಿಸಲು ಹಾರ್ಲಿಕ್ಸ್ ಅತ್ಯುತ್ತಮವಾಗಿ ನೂರ್ಪಡಿಸುತ್ತದೆ. ಹಾರ್ಲಿಕ್ಸ್‌ನಲ್ಲಿ ಅಡಕವಾಗಿರುವ ಅಮೂಲ್ಯ ಪೌಷ್ಟಿಕ ಪದಾರ್ಥಗಳು ನಿಮ್ಮ ಬಳಲಿಕೆಯನ್ನು ಬೇಗನೆ ಪರಿಹರಿಸಿ ನಿಮಗೆ ಹಿಂದಿರುಗಿ ನಿಮ್ಮ ಚೈತನ್ಯವನ್ನು ಪುನಃ ಪಡೆಯುವಿರಿ. ಹಾರ್ಲಿಕ್ಸ್ ಒಂದು ಅತ್ಯುತ್ತಮವಾದ ಪೌಷ್ಟಿಕ ಆಹಾರವೆಂದು ಎಲ್ಲರೂ ಒಪ್ಪುವಂತಾಗಿದೆ. ಹಾರ್ಲಿಕ್ಸ್ ಸೇವಕರ ಪತ್ರಗಳು ಅದರ ಗುಣವನ್ನು ಸಾರುತ್ತಿವೆ. ಹಾರ್ಲಿಕ್ಸ್ ಸೇವಿಸಿ ನಿಮಗೆ ನವಶಕ್ತಿ ಬರುವುದು ನಿಶ್ಚಯ. ಹಾರ್ಲಿಕ್ಸ್ ಸೇವಿಸಿ ನಿಮ್ಮ ಚೈತನ್ಯವನ್ನು ಪುನರ್ಜೀವಿತಗೊಳಿಸಿಕೊಳ್ಳಿರಿ.
HORLICKS
Horlicks Mixer
H. 1632
ನೀವು ಅಸ್ವಸ್ಥರಾಗಿರುವಾಗಲೂ, ಗುಣಹೊಂದುತ್ತಿರುವಾಗಲೂ ಅಥವಾ ಅಯಾಸದಿಂದ ಬಳಲಿ ಬೆಂಡಾಗಿದ್ದರೂ
ಹಾರ್ಲಿಕ್ಸ್ ಸೇವಿಸಿರಿ
ಅದು ನಿಮ್ಮನ್ನು "ಪ್ರಾತಃಕಾಲದ ದೌರ್ಬಲ್ಯ"ದಿಂದ ಕಾಪಾಡುತ್ತದೆ. ನೀವು ಚೆನ್ನಾಗಿ ನಿದ್ರಿಸುವಿರಿ. ನಿದ್ರೆಯಿಂದ ಉತ್ಸಾಹದಿಂದೇಳುವಿರಿ ಮತ್ತು ನಿಮ್ಮ ಚೈತನ್ಯವು ಪುನರ್ಜೀವಿತವಾಗುವುದು.

ಇಂದು ನಿಮ್ಮ ಹಲ್ಲುಗಳನ್ನು

ನೀವು **ಮೆಕ್ಲೀನ್** ನಿಂದ

ಉಜ ್ಜಿರುವಿರೇ?

ಹೌದು,

ಸರಿಯಾಗಿಯೆ ಉಜ್ಜಿಕೊಂಡಿದ್ದೇವೆ!

ಥಳಥಳಿಸುವ ಬಿಳೇ ಹಲ್ಲುಗಳು, ಆರೋಗ್ಯವಾದ ವಸಡು, ಸ್ವಚ್ಛ ಹಾಗೂ ತಂಪಾಗಿರುವ ಬಾಯಿ, ಇವಕ್ಕಾಗಿ **ಮೆಕ್ಲೀನ್ಸ್** ಉಪಯೋಗಿಸಿರಿ. ಇದು ಬೇಗನೇ ಕಲೆಗಳನ್ನು ಹೋಗಲಾಡಿಸಿ, ಬಿಳುಪನ್ನೇರಿಸಿ, ಹಲ್ಲುಗಳಿಗೆ ಮೆರಗು ಕೊಡುವುದು,—ಮತ್ತೆ ಇದರ ಉಪಯೋಗದ ಖರ್ಚು ಮಿತವಾಗಿದೆ.

ಎಲ್ಲಾ ಕೆಮಿಸ್ಟ, ಸ್ಟೋರ್ ಗಳಲ್ಲಿ ವಿಕ್ರಯಿಸಲ್ಪಡುತ್ತದೆ.

ಹಿಟ್ಲರನ ಹೆಡ್‌ಕ್ವಾರ್ಟರ್ಸ್

ಹಿಟ್ಲರನ ಹೆಡ್‌ಕ್ವಾರ್ಟರ್ಸ್ ಈಗ "ಟ್ರೈನ್" ಅಲ್ಲ; ಈಗ ಅವನ ಕ್ಯಾಂಪು ಪರ್ವತದ ಅಥವಾ ಕೊಡಿನ ಬಳಿಯಲ್ಲಿ. ಅವನ ನೆಲೆಯನ್ನು ಗೋಪ್ಯವಾಗಿ ಇರಿಸಲು ಸಾವಿರಾರು ರೀತಿಯ ಮುಂಜಾಗರೂಕತೆಯ ಏರ್ಪಾಡುಗಳನ್ನು ಕೈಕೊಳ್ಳಲಾಗಿದೆ.

To serve you — — Is our Ambition.

Resources of over A Crore and over Forty Lacs of Surplus Funds—these are the means by which we can serve you. The men in our thirty-eight offices, from the senior-most Director to the junior-most employee, are all eager to serve you. Come in to-day and tell us how we can serve you. Or, if you so prefer, we will call upon you at your request.

CANARA BANK, LIMITED.

ESTD: 1906.

ಕಂಠೀರವ

KANTEERAVA

KANARESE, BI-WEEKLY

XXIII] ಘುಂಗಳೂರು, ತಾರೀಕು ೧೨—೯—೧೯೪೧ [೪೮

೧೮೬೩ ವೃಷ ಸಂವತ್ಸರದ ಭಾದ್ರಪದ ಬ ೬ ಶುಕ್ರವಾರ

ರಷ್ಯ-ಜರ್ಮನಿಗಳ ಯುದ್ಧ

ಕಳೆದ ಹನ್ನೆರಡು ವಾರಗಳಿಂದ, ಪೂರ್ವ ಯುರೋಪಿನಲ್ಲಿ, ಎರಡು ಸಾವಿರ ಮೈಲು ವಿಸ್ತಾರದ ರಣಾಂಗಣದಲ್ಲಿ, ಯಾವ ಇತಿಹಾಸವೂ ಇದು ವರೆಗೂ ಕಂಡು ಕೇಳದ ಅಪೂರ್ವ ರೀತಿಯ ಭೀಕರ ಯುದ್ಧವು ರಷ್ಯಾ ಜರ್ಮನಿಗಳೊಳಗೆ ನಡೆಯುತ್ತಿದೆ. ಜಗತ್ತಿನ ಮಹಾ ರಾಷ್ಟ್ರಗಳೆರಡರ ಅಮಿತ ಸೇನೆಗಳು, ಹಗಲಿರುಳೆನ್ನದೆ ಕಾದಾಡುತ್ತಿವೆ. ಇತ್ತಟ್ಟಿನಲ್ಲಿಯೂ ಅಪಾರ ಜನ ನಷ್ಟ, ಸಾಮಗ್ರಿಗಳ ಧ್ವಂಸ!

ಜರ್ಮನಿಯು ಕೆಲಕೆಲವು ತಾತ್ಕಾಲಿಕ ವಿಜಯಗಳನ್ನು ಸಂಪಾದಿಸಲು ಶಕ್ತವಾಗಿದೆ ನಿಜ; ಆದರೆ ನಾಜಿಗಳು ರಷ್ಯವನ್ನು ಬೇಗನೆ ಗೆದ್ದೇವೆಂಬ ಈ "ಮನಸ್ಸಿನ ಮಂಡಿಗೆ" ಮಾತ್ರ ವ್ಯರ್ಥವಾಗಿದೆ. ನಾಜಿಗಳು ರಷ್ಯದವರ ಸಾಮರ್ಥ್ಯವನ್ನು ಅಂದಾಜು ಮಾಡಿದುದರಲ್ಲಿ ತಪ್ಪಿದೆ. ರಷ್ಯದವರು ಜರ್ಮನರೆಣಿಸಿದಷ್ಟು ದುರ್ಬಲರಲ್ಲ; ಅಥವಾ ಫ್ರೆಂಚರಂತೆ ನಾಜಿ ಬಲೆಯಲ್ಲಿ ಬೀಳುವವರೂ ಅಲ್ಲ; ರಷ್ಯದವರು ಧೀರತನದಿಂದ, ಸ್ವದೇಶ ವಾತ್ಸಲ್ಯದಿಂದ, ಜಯಸಿದ್ಧಿಯ ಧೃಢ ಸಂಕಲ್ಪದೊಡನೆ ಕಾದಾಡುತ್ತಿದ್ದಾರೆ. ಈ ಕಾರಣದಿಂದಲೇ ರಷ್ಯದಲ್ಲಿ ಚಳಿಗಾಲದಲ್ಲಿಯೂ ಘೋರ ಸಂಗ್ರಾಮವನ್ನೇ ನಾವು ಹಾರೈಸಬಹುದಾಗಿದೆ.

ಕಳೆದ ಹನ್ನೆರಡು ವಾರಗಳ ವಿಮರ್ಶೆಯನ್ನು ನಾವೀಗ ಮಾಡಿ ನೋಡಿದರೆ, ಕೆಲವೊಂದು ವಿದ್ಯಮಾನಗಳ ಅನುಭವವು ನಮಗಾಗದಿರದು. ವಸ್ತುತಃ ಜರ್ಮನರು ಮಾಸ್ಕೋ, ಕೀವ್ ಮತ್ತು ಲೆನಿನ್‌ಗ್ರಾಡ್‌ಗಳ ಮೇಲೆ ಏಕಕಾಲದಲ್ಲಿ ಮುಂಬರಿಯಬೇಕೆಂದಿದ್ದ ಅವರ ಆ ಯೋಜನೆ ತಲೆ ಕೆಳಗಾಗಿ—ಇದಕ್ಕೆ ಕಾರಣ ರಷ್ಯದವರ ರಕ್ಷಣಾ ವಿಧಾನಚಾತುರ್ಯ—ಈಗ ಲೆನಿನ್‌ಗ್ರಾಡ್ ಒಂದನ್ನೇ ನಾಜಿಗಳು ಆಕ್ರಮಿಸಲೆತ್ನಿಸುವ ಸ್ಥಿತಿಯೊದಗಿತು. ಫಿನ್‌ಲ್ಯಾಂಡಿನ ಹಳೆಯ ಗಡಿಗಳ ವರೆಗೂ ರಷ್ಯಾ ಹಿಂದೆ ಸರಿದಿರುವುದರಿಂದ, ಫಿನ್ನರು ರಷ್ಯದ ಕಡೆಗೆ ಸಂಧಾನದ ದೃಷ್ಟಿಯಿಂದ ಇಣಿಕಿ ನೋಡುವಂತಾಯಿತು. ಒಂದು ವೇಳೆ, ಫಿನ್‌ಲ್ಯಾಂಡಿನ ನಾಯಕರು ಕೆಲವರ ಆಗ್ರಹದಿಂದ ಫಿನ್‌ಲ್ಯಾಂಡ್ ಇನ್ನೂ ರಷ್ಯದ ವಿರುದ್ಧ ಕಾದಾಡುವಂತಾದರೆ, ಅದು ಆ ದೇಶದ ಜನಗಳ ತಪ್ಪಲ್ಲ.

ಲೆನಿನ್‌ಗ್ರಾಡ್ ರಷ್ಯದ ಕೈಗಾರಿಕೆಗಳ ಕೇಂದ್ರ; ಹಡಗು ಕಟ್ಟುವ ಒಂದು ಮುಖ್ಯ ಪ್ರದೇಶ. ಅದು ಕೈ ತಪ್ಪಿದರೆ, ರಷ್ಯಕ್ಕೆ ನಾನಾ ಬಗೆಯ ತೊಂದರೆಗಳು ನಿಜವಾದರೂ ರಷ್ಯದವರು ಕೊಂಚಕ್ಕೆ ಅದನ್ನು ಬಿಟ್ಟುಕೊಡುವ ಹಾಗಿಲ್ಲ. ಹಾಗೇ ಒಡೆಸ್ಸದ ಸ್ಥಿತಿಯೂ!

ಮಧ್ಯ ರಣರಂಗದಿಂದ ಶುಭವಾರ್ತೆಗಳು ಬಂದಿವೆ. ಅಲ್ಲಿ ರಷ್ಯದವರು ಜರ್ಮನರ ಎಂಟು ಡಿವಿಜನ್‌ಗಳನ್ನು ಧ್ವಂಸ ಮಾಡಿ, ಸೊಮ್‌ಲೆನ್‌ಸ್ಕಿನ ಬಳಿಯೆಲ್ಲಾವನ್ನು ತಿರುಗಿ ಹಿಡಿದಿದ್ದಾರೆ. ಜರ್ಮನರಿಗೆ ಇದೊಂದು ದೊಡ್ಡ ಪೆಟ್ಟು.

ಒಟ್ಟಿನಲ್ಲಿ, ರಷ್ಯಾ ಇಂದಿಗೂ ಧೀರತನದಿಂದ ಕಾದುತ್ತಿದೆ. ಆದರೆ, ಬಲ್ಗೇರಿಯಾ, ಇಟೆಲಿಗಳು ರಷ್ಯದ ರಣರಂಗಕ್ಕೆ ತಮ್ಮ ಸೇನೆಗಳನ್ನು ಕಳುಹಿಸುವುತಿರುವುದರಿಂದ, ಟರ್ಕಿಯನ್ನು ಜರ್ಮನರು ಒತ್ತಾಯ ಪಡಿಸುತ್ತಿರುವುದರಿಂದ, ರಷ್ಯವು ಇನ್ನೂ ಹೊಸ ಸೇನೆಗಳನ್ನು ಕಳುಹಿಸಿ ಕಾದಾಡಬೇಕಾಗಿದೆ ಎಂಬುದು ನಿರ್ವಿವಾದ.

ದೂರದ ಪೂರ್ವದಲ್ಲಿ ಅಮೆರಿಕ, ಬ್ರಿಟನ್, ಚೀನಾ, ಡಚ್ಚರ ಬಲಗಳೆಷ್ಟು?

ಒಬ್ಬ ಜಪಾನೀ ಪ್ರಮುಖಾಧಿಕಾರಿಯ ಅಂದಾಜು

ಅಮೆರಿಕವು, ಜಪಾನನ್ನು ಸುತ್ತುಗಟ್ಟಲಿರುವ ರಾಷ್ಟ್ರಗಳ ನಾಯಕನಂತೆ ವರ್ತಿಸುತ್ತಿದೆ; ಈ ರಾಷ್ಟ್ರಗಳ ಕಾರ್ಯೋದ್ದೇಶವು ಪೆಸಿಫಿಕ್ಕಿನಲ್ಲಿ ಅಮೆರಿಕಕ್ಕೆ ಸರ್ವಾಧ್ಯಕ್ಷ ಪಾರುಪತ್ಯೆಯನ್ನು ಒದಗಿಸಿಕೊಟ್ಟು, ಬ್ರಿಟನಿಗೆ ಬರಬಹುದಾದ ಅಪಜಯವನ್ನು ತಪ್ಪಿಸಿ, ಹಾಗೆ ಪೂರ್ವ ಏಷಿಯದಲ್ಲಿ ಸಹಕಾರದ ಕ್ಷೇತ್ರಗಳನ್ನು ನಿರ್ಮಿಸಬೇಕೆಂದಿರುವ ಈ ಸ್ಥಾಪನೆಯ ಕಾರ್ಯವನ್ನು ಮುಂದೊತ್ತಲಿರುವ ಜಪಾನಿನ "ಐತಿಹಾಸಿಕ ಶಿಷ್ಟಮಂಡಲದ ಕಾರ್ಯಕ್ರಮಗಳಿಗೆ ಭಂಗ ತರುವುದೇ" ಎಂದು ಜಪಾನೀ ನೌಕಾ ಶಾಖೆಯ ಒಬ್ಬ ಪ್ರಧಾನಾಧಿಕಾರಿ ಲೆಫ್ಟಿನೆಂಟ್ ಕಮಾಂಡರ್ ಕಂಗ್ಯೋ ಮಿಂಗನ ಹೇಳಿಕೆ.

ಈ ಉದ್ದೇಶಕ್ಕಾಗಿ ಆ ನಾಲ್ಕು ರಾಷ್ಟ್ರಗಳು ಜಪಾನಿನ ವಿರುದ್ಧ ೨೦೦ ಯುದ್ಧ ನೌಕೆ, ೧೫೫೦ ವಿಮಾನ ಮತ್ತು ೨೫೦೦೦೦ ಸಿಪಾಯಿಗಳನ್ನು ಆಗಲೇ ಕೂಡಿಸಿಟ್ಟಿದ್ದು ಇನ್ನೂ ಚೀನದಿಂದ ಯುದ್ಧ ವೀರರನ್ನು ಸಂಗ್ರಹಿಸುತ್ತಿರುವುದಾಗಿಯೂ ಆತ ಹೇಳುತ್ತಾನೆ.

ರಷ್ಯದ ವಿಚಾರವನ್ನು ಅವನು ಬೇರೆಯಾಗಿ ಎತ್ತಿಲ್ಲವಾದರೂ, ಅವನು ಒಟ್ಟಿಗೆ ಆ ಬಲಗಳ ವಿವರವನ್ನು ಹೀಗೆ ತಿಳಿಸಿದ್ದಾನೆ. **ಮಲಯ** ದಲ್ಲಿ — ೬ ಕ್ರುಯಿಜರು; ೬ ಡಿಸ್ಟ್ರಾಯರು. ಸುಮಾರು ೭೦ ಉಚ್ಚ ವೇಗದ ಟಾರ್ಪಿಡೋ ಮತ್ತಿತರ ದೋಣಿಗಳು; ೭೦ ಸಾವಿರ ಕಾಯಂ ಸೈನಿಕರು; ೨೦ ಸಾವಿರ ಸ್ವಯಂ ಸೇವಕರು; ೫೦೦ ವಿಮಾನಗಳು, ಇವುಗಳಲ್ಲಿ ೨೦೦ ಫ್ರೆಂಟ್‌ಲ್ಯಾನಿನವು.

ಬರ್ಮಾ:—೫೫ ಸಾವಿರ ಸೇನೆ; ೫೦ ಯುದ್ಧವಿಮಾನ ಇವೆ. **ಫಿಲಿಪ್ಪೈನ್ಸ್** ನಲ್ಲಿ ೨ ಕ್ರುಯಿಜರ್, ೧೪ ಡಿಸ್ಟ್ರಾಯರ್ ೧೭ ಸಬ್‌ಮೆರೈನ್, ೪೫ ಇತರ ಯುದ್ಧ ನೌಕೆ, ೨೦೦ ವಿಮಾನ, ೨೫ ಸಾವಿರ ಸೈನಿಕರು ಇದ್ದಾರೆ. **ನೆದರ್‌ಲ್ಯಾಂಡ್ ಈಸ್ಟ್ ಇಂಡೀಸ್**ನಲ್ಲಿ ೮ ಯುದ್ಧದ ಹಡಗು, ೫೦೦ ವಿಮಾನ, ೧ ಲಕ್ಷ ಸೈನಿಕರು.

ಇಷ್ಟೇ ಅಲ್ಲದೆ ಅಮೆರಿಕದ ಜಂಕಿಂಗ್ ಬಾಂಬರುಗಳನ್ನು, ಅಮೆರಿಕದ ವೈಮಾನಿಕರೊಡನೆ ೧೦೦ರಿಂದ ೩೦೦ಕ್ಕೆ ಹೆಚ್ಚಿಸಬಹುದೆಂದಿದ್ದಾನೆ. ಸಪ್ಟೆಂಬರಿನಲ್ಲಿ ಜಪಾನಿನಲ್ಲಿ ಹತ್ತು ದಿನಗಳ ವರೆಗೆ, ವಿಸ್ತಾರ ಪ್ರಮಾಣ "ಬ್ಲಾಕ್ ಔಟ್" ನಡೆಯುವುದೆಂದಿದ್ದಾನೆ.

ಹಿಂದೂದೇಶ

ಜೈನ ದೇವಾಲಯದಲ್ಲಿ ಕಳವು

ಅನಂತಚತುರ್ದಶಿಯಂದು ಸಾದರ ಬಜಾರಿನ ಜೈನ್ ದೇಗುಲದ ಸುಮಾರು ೫೫ ಸಾವಿರ ಬಾಳುವ ಮೂರ್ತಿಗಳೂ ಅವುಗಳ ಸಿಂಹಪೀಠಗಳೂ ಕಾಣೆಯಾಗಿವೆ.

ಸರ್‌ಚಾರ್ಜಿನ ಸಂಬಂಧ ತೆರಬೇಕು

ಭೀಮಾವರಂ ಪುರಸಭೆಯ ಬೋರ್ಡಿನ ಮಾಜಿ ಪ್ರೆಸಿಡೆಂಟ ಶ್ರೀ। ಜಿ. ನಾರಾಯಣ ಮೂರ್ತಿ ಎಂಬವರಿಂದ ೧೯೩೫-೩೬ನೇ ಇಸವಿಯ ಸಂಬಂಧ, ೨ ಸಾವಿರ ರೂಪ್ಯಾಗಳನ್ನು "ಸರ್ ಚಾರ್ಜಿನ" ಲೆಕ್ಕದಲ್ಲಿ ವಸೂಲ್ಮಾಡ ಬೇಕೆಂದು ಸರಕಾರವು ಅಪ್ಪಣೆಮಾಡಿದೆ.

ಶ್ರೀ। ಭುಲ್ಲಾಭಾಯಿ ದೇಸಾಯಿಗಳು

ಯರ್ನಡಾ ಜೈಲಲ್ಲಿ ಇರುವ ಶ್ರೀ। ಭುಲ್ಲಾಭಾಯ್ ದೇಸಾಯಿಯವರು ರಕ್ತದ ಒತ್ತಾಟದಿಂದ ಕಷ್ಟಪಡುತ್ತಿರುವರೆಂದೂ, ಜೈಲ್ಲಲ್ಲಿ ಅವರನ್ನು ಕಂಡು ಬಂದ ಅವರ ಮಗ ಶ್ರೀ। ಧೀರ ಭಾಯ್‌ಯವರು ತಮ್ಮ ತುದೆಗೀಗ ವಾಸಿ ಎಂದೂ ಅವರ ಸ್ಥಿತಿ ಚಿಂತಾಸ್ಪದವಲ್ಲವೆಂದೂ ತಿಳಿಸಿದ್ದಾರೆ.

ಸರ್. ಎಂ. ವಿಶ್ವೇಶ್ವರಯ್ಯನವರ ಕರೆ

ಪೂನಾದಲ್ಲಿ ಜರುಗಿದ ಮಹಾರಾಷ್ಟ್ರದ ಕಾರ್ಖಾನೆಗಳವರ ಮತ್ತು ವ್ಯವಹಾರಜ್ಞರ ಒಂದು ಮಿಟಿಂಗಿನಲ್ಲಿ ನಿಖಿಲಭಾರತ ಕಾರ್ಖಾನೆಗಳ ಸಂಸ್ಥೆಯ ಅಧ್ಯಕ್ಷರಾದ ಸರ್. ಎಂ. ವಿಶ್ವೇಶ್ವರಯ್ಯನವರು ಮಾತಾಡುತ್ತ ಈಗಿರುವ ಭಾರತದ ಕಾರ್ಖಾನೆಗಳ ಉತ್ಪನ್ನದ ಶಕ್ತಿಯನ್ನು ಹೆಚ್ಚಿಸಿ, ಅದರೊಂದಿಗೆ ಅಗತ್ಯವಿರುವ ಸಂಗ್ರಹಗಳೊಡನೆ ಹೊಸ ಕಾರ್ಖಾನೆಗಳನ್ನು ಸ್ಥಾಪಿಸಬೇಕೆಂದರು.

ಡಾಕದ ದಂಗೆಯಲ್ಲಿ

ಈ ದಂಗೆಯಲ್ಲಿ ಸತ್ತವರು ೯೪ ಮಂದಿ, ಗಾಯಗೊಂಡವರು ೩೧೩ ಮಂದಿ, ಲೂಟಿಯಾದ ಮನೆಗಳ ನಷ್ಟವಾದ ಪದಾರ್ಥಗಳ ಸಂಖ್ಯೆ ತಿಳಿದಿಲ್ಲವೆಂದು ಬಂಗಾಳದ ಹೋಂ ಮೆಂಬರರು ಅಲ್ಲಿನ ಎಸೆಂಬ್ಲಿಯ ಪ್ರಶ್ನೆಯೊಂದಕ್ಕೆ ಉತ್ತರ ಹೇಳಿದರು.

ಬಿಹಾರಿಗೆ ವಿದ್ಯುಚ್ಛಕ್ತಿಯ ಸರಬರಾಯಿ

ಬಿಹಾರು ಪ್ರಾಂತದ ಕೈಗಾರಿಕೆ ಮತ್ತು ನೀರಾವರಿಯ ಕಾರ್ಯಗಳಿಗಾಗಿ ವಿದ್ಯುಚ್ಛಕ್ತಿಯ ಸರಬರಾಯಿಯದೊಂದು ಯೋಜನೆ ತಯಾರಾಗಿದ್ದು, ಅದೀಗ ಬ್ರಿಟಿಷ್ ವಿದ್ಯುಚ್ಛಕ್ತಿಗಾರರ ಒಂದು ಸಂಸ್ಥೆಯ ಸಮಾಲೋಚನೆಯಲ್ಲಿದೆ; ಈ ಯೋಜನೆಯ ವೆಚ್ಚ ಮೂರು ಕೋಟಿ ರೂಪ್ಯಾಗಳು!

ಬಟ್ಟೆಗಿರಣಿಗಳವರ ಮಹಾಸಭೆ

ಇಂಡಿಯದ ಎಲ್ಲ ಭಾಗಗಳಿಂದಲೂ ಬಂದಿರುವ ಸುಮಾರು ೫೦ ದೊಡ್ಡ ಬಟ್ಟೆ ಕಾರ್ಖಾನೆಗಳ ಮಾಲಕ ಪ್ರತಿನಿಧಿಗಳ ಒಂದು ಕಾನ್ಫರೆನ್ಸ್ ನೆರೆದು ಮುಂಬರಿಯುತ್ತಿದೆ. ಬಟ್ಟೆ ಬೆಲೆಯನ್ನು ಹತೋಟಿಯಲ್ಲಿ ಇರಿಸಿಕೊಳ್ಳಬೇಕಾದ ವಿಚಾರದ ಸೂಚನೆ ಬಂದಿದೆ. ಯುದ್ಧಕ್ಕೆ ಬೇಕಾಗುವ ಸರಬರಾಯಿಯ ಕುರಿತು ಒಂದು ನಿರ್ಧಾರಕ್ಕೆ ಬಂದಿದ್ದು ಸಿವಿಲಿಯನರ ಸರಬರಾಯಿಯ ಕುರಿತೀಗ ಪರ್ಯಾಲೋಚನೆ ನಡೆಯುತ್ತಿದೆ.

ಬ್ರಾಡ್‌ಕಾಸ್ಟಿಂಗ್ ಕಾರ್ಯಭಾರಗಳ ವರ್ಗ

ಬ್ರಾಡ್‌ಕಾಸ್ಟಿಂಗ್ ಶಾಖೆಯ ಕಾರ್ಯಭಾರಗಳು "ಕಮ್ಯುನಿಕೇಶನ್" ಇಲಾಖೆಯಿಂದ "ಇನ್‌ಫರ್ಮೇಶನ್" ಇಲಾಖೆಗೆ ವರ್ಗಾಯಿಸಲ್ಪಡಬಹುದೆಂದು ತಿಳಿದುಬಂದಿದೆ.

ಬರ್ಮದ ಅಕ್ಕಿ

ಬರ್ಮದ ಸರಕಾರ ತಾನೇ ಅಲ್ಲಿಂದ ಅಕ್ಕಿಯನ್ನು ಹೊರಗೆ ಸಾಗಿಸುವ ಅಧಿಕಾರ ವಹಿಸಿದುದರಿಂದ ಬರುವ ವರ್ಷದ ಅಕ್ಕಿಯ ಬೆಳೆಯ ಹತೋಟಿಯನ್ನು ತನ್ನಲ್ಲೇ ಇರಿಸಿಕೊಂಡಿದೆ.

ಮಲಬಾರ್ ಸತ್ಯಾಗ್ರಹಿಯ ಕೈದು

ಪೊನ್ನಾನಿ ಪ್ರಾಂತದ ಶ್ರೀ। ಸಿ. ಕೇಂಶವನ್ ನಾಯರ್ ಎಂಬ ಸತ್ಯಾಗ್ರಹಿ ಡಿಲ್ಲಿಯ ಕಡೆಗೆ ಪಾದಚಾರಿಯಾಗಿ ಹೊರಟಿದ್ದು ಆತನನ್ನು ಉತ್ತರ ಕನ್ನಡದಲ್ಲಿ ಕೈದುಮಾಡಿರುತ್ತಾರೆ.

ಶ್ರೀರಂಗ ದೇವಸ್ಥಾನದಲ್ಲಿ ಚಿನ್ನದ ಕಳವು

ಶ್ರೀರಂಗದ ದೇವರನ್ನು ಹೊರಲು ಉಪಯೋಗಿಸುವ ಕೋಲುಗಳಿಂದ ಸುಮಾರು ೧ ಸಾವಿರ ರೂಪಾಯಿ ಬಾಳುವ ಬಂಗಾರದ ತಗಡುಗಳು ಕಳವಾಗಿದ್ದು ಆ ಸಂಬಂಧ ದೇವಸ್ಥಾನದ ನೌಕರರಲ್ಲಿ ಇಬ್ಬರ ಕೈದಾಗಿದೆ.

ವಿಮಾನ ದಾಳಿಯ ಮುಂಜಾಗರೂಕತೆಯ ಏರ್ಪಾಡು

ಕಲ್ಕತ್ತೆಯಲ್ಲಿ, ವಿಮಾನ ದಾಳಿಯಾದಲ್ಲಿ, ಅದರಿಂದ ಮನೆಮಾರುಗಳನ್ನು ಕಳೆದುಕೊಂಡು ಅನಾಥರಾಗುವವರಿಗೆ ಸಹಾಯ ನೀಡಲು ಬಂಗಾಳ ಸರಕಾರವು ನಿರ್ಧರಿಸಿ, ಆ ಬಗೆಗೆ ಸುಮಾರು ೩,೮೦,೦೦೦ ರೂಪಾಯಿಗಳನ್ನು ವೆಚ್ಚ ಮಾಡಲಿದೆ. ಬಂಗಾಳದ ಸರಕಾರದ ಆ ಯೋಜನೆಯಂತೆ, ಆ ಅನಾಥರಿಗೆ ಸುಮಾರು ೧ ವಾರದ ವರೆಗೆ ಉಚಿತವಾಗಿ ಅನ್ನವೂ, ಆಶ್ರಯ ಸ್ಥಾನವೂ ದೊರಕುವುದು. ಈ ಅನಾಥರ ಸಂಖ್ಯೆ ಸುಮಾರು ೫೧ ಸಾವಿರ ಅಂದರೆ, ಕಲ್ಕತ್ತಾ ನಗರದ ಪ್ರಜಾ ಸಂಖ್ಯೆಯಲ್ಲಿ ಸೇಕಡಾ ೧ರಷ್ಟು ಎಂದು ಅಂದಾಜು ಹಾಕಲಾಗಿರುವುದು. ಹಾಗೆ ಆ ಒಂದು ವಾರದ ಬಳಿಕ ಈ ಅನಾಥರು ಬೇರೆ ಕಡೆ ತಮ್ಮ ಶಾಶ್ವತ ನಿವಾಸಗಳನ್ನೇರ್ಪಡಿಸಿಕೊಳ್ಳಬೇಕಾಗುವುದು. ವಿಮಾನ ದಾಳಿಯಿಂದ ನೊಂದವರಿಗೆ ಈ ಆಶ್ರಯ ಪಡೆಯುವಂತೆ ಟಿಕೆಟುಗಳ ಏರ್ಪಾಡಿದೆ. ಸರಕಾರ ಈ ಯೋಜನೆಯ ಹಣ ಕಾಸಿನ ಭಾರವನ್ನು ನೋಡಿಕೊಳ್ಳುವುದು; ಕಲ್ಕತ್ತಾ ಕಾರ್ಪರೇಶನ್ ಈ ಯೋಜನೆಯ ಕ್ರಮಗಳನ್ನು ಜಾರಿಯಲ್ಲಿ ತರುವುದು.

ಸಪುರವಾಗಿ
ಹಾಗೂ
ಚೆಲುವಾಗಿ
ಇರಬಾರದೇಕೆ



ಪ್ರತಿ ರಾತ್ರಿಯೂ ಎರಡು ಬೈಲ್ ಬೀನ್ಸ್ ಸೇವಿಸುವ ಅಮೂಲ್ಯ ಸೂತ್ರವನ್ನನುಸರಿಸಿದಲ್ಲಿ, ಆಹಾರ ಕಡಿಮೆಮಾಡದೆ ಅಥವಾ ಉಗ್ರ ಅಂಗಸಾಧನೆ ಮಾಡದೆ ನೀವು ಆರೋಗ್ಯವಾಗಿಯೂ, ಮನಮುಗ್ದ ಸಪುರವಾಗಿಯೂ ಇರಬಹುದು.

ಬೈಲ್ ಬೀನ್ಸ್ ಸೇವಿಸಿದ ಮರುದಿನವೇ ನೀವು ನಿಮ್ಮಲ್ಲಿ ಉತ್ಸಾಹವನ್ನು ಕಾಣುತ್ತೀರಿ. ನಿಮ್ಮ ದೇಹ ತೂಕದಲ್ಲಿ ವ್ಯತ್ಯಾಸವನ್ನು ಬೇಗನೆ ಕಂಡುಕೊಳ್ಳುವಿರಿ. ಆದುದರಿಂದ ಪ್ರತಿಯೊಬ್ಬರ ಕೌತುಕವನ್ನೆಬ್ಬಿಸುವ ದೇಹಾಕೃತಿ ಬೇಕಾದರೆ, ಬೈಲ್ ಬೀನ್ಸ್‌ನ ಸಹಾಯದಿಂದ "ನಿಪ್ರೆಯಲ್ಲಿರುವಾಗಲೇ ಸಪುರ"ವಾಗಿರಿ.

ಪ್ರತಿದಿನವೂ 1,000,000ಕ್ಕೆ ಮೇಲ್ಪಟ್ಟು ಬೈಲ್ ಬೀನ್ಸ್ ಮಾರಲ್ಪಡುತ್ತವೆ. ಎಲ್ಲಾ ಔಷಧಿ ವ್ಯಾಪಾರಿಗಳು ಬೈಲ್‌ಬೀನ್ಸ್‌ಗಳನ್ನು ಸ್ಟಾಕ್‌ಮಾಡುತ್ತಾರೆ. ಬಾಟ್ಲಿ ಒಂದರ ಬೆಲೆ ರೂಪ್ಯಾ ಒಂದು ಉದಾರ ಉಚಿತ ನಮೂನೆಗಾಗಿ ಬರಕೊಳ್ಳಿ. ಅಂಚೆ ವೆಚ್ಚಕ್ಕಾಗಿ ಒಂದಾಣೆ ಚೀಟಿ ಕಳಿಸಿರಿ. ಏಜಂಟರು: ಮೆಸರ್ಸ್ ದಾಧಾ ಎಂಡ್ ಕೊ., ಪಿ. ಟಿ., ಮದ್ರಾಸು.

ಬೈಲ್ ಬೀನ್ಸ್, ಈ ತೆರ ಮಾಡುತ್ತವೆ: ಬೈಲ್ ಬೀನ್ಸ್ ಶುದ್ಧ ಸಸ್ಯ ಸಾರಗಳಿಂದ ತಯಾರಿಸಿದ್ದಾಗಿವೆ; ಆದುಕಾರಣ ಪೂರ್ಣ ವಿಶ್ವಾಸದಿಂದ ಇವನ್ನು ಕ್ರಮವಾಗಿ ಪ್ರತಿ ರಾತ್ರಿಯಲ್ಲೂ ಸೇವಿಸಬಹುದು. ಇವು ಅಂಗರಚನೆಯನ್ನು ಚೇತನಗೊಳಿಸಿ, ರಕ್ತವನ್ನು ಶುದ್ಧಮಾಡಿ, ಕೊಬ್ಬುಂಟಾಗುವ ಮಲಪದಾರ್ಥವನ್ನು ದಿನವೂ ಹೊರಗೆಡಹುವುವು; ಹಾಗೆ, ನಿಮ್ಮ ಆರೋಗ್ಯಾಭಿವೃದ್ಧಿಮಾಡಿ ದೇಹಾಕೃತಿಯನ್ನು ಆಕರ್ಷಕವಾಗಿ ಮಾಡುವುವು.

BILE BEANS

ಬೈಲ್‌ಬೀನ್ಸ್ ನಿಮ್ಮನ್ನು ಉಲ್ಲಾಸವಾಗಿ, ಆರೋಗ್ಯವಾಗಿ ಹಾಗು ಒಸ್ಪಾಗಿಡುತ್ತವೆ.

ಕಾಂಗ್ರೆಸ್ ವಿಧಾಯಕ ದ. ಕ. ಕಾರ್ಯಕ್ರಮ

ಕಳೆದ ಬುಧವಾರ ತಾ. ೧೦ನೇ ಸಂಜೆ, ದ. ಕ. ಜಿಲ್ಲಾ ಕಾಂಗ್ರೆಸ್ ಕಮಿಟಿಯ ಸಂಚಾಲಕ ಶ್ರೀ। ಬಿ. ದಾಮೋದರ ಬಾಳಿಗ ಇವರ ಕರೆಯಂತೆ, ಫೆಲಿಕ್ಸ್ ಸೈ ಬಜಾರದ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಮಂಗಳೂರು ಕಾಂಗ್ರೆಸ್ ಕೆಲಸಗಾರರ ದೊಂದು ಸಭೆ ಸೇರಿತ್ತು. ಎಂ. ಎಲ್. ಎ.ಗಳಾದ ಶ್ರೀ।ಗಳಾದ ಏ. ಬಿ. ಶೆಟ್ಟಿ, ಕೆ. ಆರ್. ಕಾರಂತ, ಜಿನರಾಜ ಹೆಗ್ಗಡೆ (ಕೇಂದ್ರದವರು) ಇವರಲ್ಲದೆ ಬಿ. ಮೈಕುಂಠ ಬಾಳಿಗ, ಎಚ್. ಆರ್. ಮಲ್ಯ ಮೊದಲಾದವರೇ ಎಂಟಿಂಗಿಗೆ ದಯೆ ಮಾಡಿಸಿದ್ದರು. ಶ್ರೀ। ದಾ. ಬಾಳಿಗರು ಸಮಗ್ರ ಭಾರತ ಕಾಂಗ್ರೆಸ್ ಕಮಿಟಿ ಆಫೀಸ್ ಸೆಕ್ರಟರಿಗಳಾದ ಮಿ। ಸಾವಿಕ್ ಆಲಿಯವರೊಡನೆ ತಮಗಾದ ಭೇಟಿ, ಮಾತುಕಥೆಗಳ ಕುರಿತಾಗಿ ವಿವರಿಸಿದರು. ಜಿಲ್ಲೆಯಲ್ಲಿ ಕಾಂಗ್ರೆಸ್ ವಿಧಾಯಕ ಕಾರ್ಯಕ್ರಮಗಳನ್ನು ಪ್ರಾಮುಖ್ಯವಾಗಿ ಆಚರಣೆಯಲ್ಲಿ ತರುವ ವಿಚಾರದಲ್ಲಿ ಸಮಾಲೋಚಿಸಿ ಆ ಸಂಬಂಧವಾದ ಯೋಗ್ಯ ಯೋಜನೆಯನ್ನು ಏರ್ಪಡಿಸುವಂತೆ ಒಂದು ಕಮಿಟಿಯನ್ನು ರಚಿಸಲಾಯಿತು. ಒಂದು ವಾರದ ಕಾಲ ಗಾಂಧೀ ಜಯಂತಿಯನ್ನು ಆಚರಿಸುವಂತೆಯೂ ನಿರ್ಧರಿಸಲಾಯಿತು.

ಕೊನೆಯಚ್ಚೊತ್ತು

ರಷ್ಯದ ಪ್ರತಿಭಟನೆ ಸುತ್ರ್ಯರ್ಥ, ರಷ್ಯಕ್ಕೆ ಸರಬರಾಯಿ ಕಳುಹಿಸಬೇಕು, ಆ "ಎಂಟು ಪ್ಯಾಂಟು"ಗಳು ಯುರೋಪಿನ ಡೆಮೊಕ್ರೆಸಿ ಮಟ್ಟಿಗೆ ಮಾತ್ರ. ಇಂಡಿಯದ ವಿಚಾರ ಆದು ಪ್ರತ್ಯೇಕ, ಅದೀಗ ಬೇಡ ಯುದ್ಧ ಮುಗಿಯಲಿ, ನೋಡುವ ಎಂದು ಬ್ರಿಟಿಷ್ ಪ್ರಧಾನರು ಪಾರ್ಲಿಮೆಂಟಿನಲ್ಲಿ ಆಡಿದರು; ಕೂಚ್ಚಿಯ ದಿವಾನರಾಗಿ ಮಿ। ಎ. ಎಫ್. ಡಬ್ಲ್ಯೂ. ಡಿಕ್ಸರು ನೇಮಕ ಹೊಂದಿದ್ದಾರೆ—ಮಿತ್ರರ ಸಂಧಿ ಶರ್ತಗಳನ್ನು ಇರಾನಿನವರೊಪ್ಪಿಕೊಂಡಿದ್ದಾರೆ—ಕಾಹಿಲೆಯ ನಿಮಿತ್ತ ಶ್ರೀ। ಭುಲ್ಲಿಭಾಯ್ ದೇಸಾಯಿಯವರಿಗೆ ಬೇಗನೇ ಬಿಡುಗಡೆಯಾಗಬಹುದೆಂದು ಹಾರೈಕೆ.

ಮಂಗಳೂರು

ಮಹಿಳಾ ಆ। ಬೆಂಚ್ ಮ್ಯಾಜಿಸ್ಟ್ರೇಟರು

ಮಿಸೆಸ್ ವಿಲ್ಲಿ ಲೂಯಿಸ್ ಎಂಬ ಮಹಿಳೆಯು ಕಾರ್ಕಳದ ಆನರೆರಿ ಬೆಂಚ್ ಮ್ಯಾಜಿಸ್ಟ್ರೇಟರಾಗಿ ನೇಮಿಸಲ್ಪಟ್ಟಿದ್ದಾರೆ.

ಶ್ರೀ। ಎ. ವಿ. ಥಾಕ್ಕರರ ಆಗಮನ

ಅಖಿಲಭಾರತ ಹರಿಜನ ಸೇವಕ ಸಂಘದ ಸೆಕ್ರೆಟರಿಯಾದ ಶ್ರೀ। ಎ. ವಿ. ಥಕ್ಕರರು ಈ ಜಿಲ್ಲೆಯ ಪ್ರವಾಸವನ್ನು ಈ ರೀತಿ ಬೆಳೆಸುವರೆಂದು ತಿಳಿದುಬಂದಿದೆ. ಸೆಪ್ಟೆಂಬರ ತಾ. ೫ರಲ್ಲಿ ಕಾಸರಗೋಡು; ತಾ. ೬–೭ ಮಂಗಳೂರು; ತಾ. ೮ ಕಾರ್ಕಳ–ಉಡುಪಿ. ತಾ. ೯ರಲ್ಲಿ ಅವರು ಹಿಂದಕ್ಕೆ ತೆರಳುವರು.

ಕಯ್ಯೂರು ಪ್ರಕರಣ

ಈ ಮೊಕದ್ದಮೆಯಲ್ಲಿ ಆಗಲೇ ೮೮ ಸಾಕ್ಷಿಗಳ ವಿಚಾರಣೆ ಮುಗಿದು, ಇನ್ನು ಸುಮಾರು ೧೦ ಸಾಕ್ಷಿಗಳ ವಿಚಾರಣೆ ಬಾಕಿ ಇದೆ.

ಕೋಟ

ಗಿಳಿಯಾರು ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಕಳೆದ ವಾರ ಯುದ್ಧ ವಿಚಾರ ಪ್ರಸಾರಕ ಸಭೆಯೊಂದು ಶ್ರೀ। ಡಾ। ನಾರಾಯಣ ಸೆಟ್ಟರ ಅಧ್ಯಕ್ಷತೆಯಲ್ಲಿ ನೆರೆಯಿತು. ಈ ಪ್ರಚಂಡ ಸಭೆಯಲ್ಲಿ ಶ್ರೀ। ಸುಬ್ಬಣ್ಣ ಹೆಗ್ಗಡೆಯವರೂ, ಶ್ರೀ। ಶೇಷಗಿರಿನಾವುಡರೂ ಪ್ರಸಕ್ತ ಯುದ್ಧದಿಂದ ಭಾರತಕ್ಕಾಗುವ ಹಾನಿ ಮತ್ತು ಬ್ರಿಟಿಷರ ಶ್ರೇಯಸ್ಸನ್ನು ಕೋರಿ ಭಾಷಣಮಾಡಿದ ಮೇಲೆ, ಅಧ್ಯಕ್ಷರು ಎಂತವಾದ ಮಾತುಗಳಿಂದ ಉಪನ್ಯಾಸಕರ ಮಾತಿಗೆ ಒಪ್ಪವಿಟ್ಟು ಸಭಾಕಾರ್ಯಗಳನ್ನು ಸಾಂಗಗೊಳಿಸಿದರು. ಆ ಮೇಲೆ ಎಲ್ಲರಿಗೂ ಪಂಚಕಜ್ಜಾಯ ಹಂಚೋಣವಾಯಿತು.

ಪಾಂಡೇಶ್ವರ

೭–೯–'೪೪ನೇ ಆದಿತ್ಯವಾರ ಈ ಗ್ರಾಮದ ಪ್ರಾಥಮಿಕ ಶಾಲೆಯಲ್ಲಿ ಒಂದು ಯಕ್ಷಗಾನ (ತಾಳಮದ್ದಳೆ) ಸಮಾರಂಭವು ಜರುಗಿತು. ಪ್ರಸಂಗ ಹ। ರಾಮಭಟ್ಟರ ಜರಾಸಂಧವಧೆ. ಆ ಸಭೆಯಲ್ಲಿ ಶ್ರೀ। ಐ. ಸುಬ್ರಾಯ ವಿಶಾರದ–ಇವರ ಮೃದಂಗವಾದನವೂ, ಶ್ರೀ। ಕಾಂತಪ್ಪ ಮಾಸ್ತರರವರ ಜರಾಸಂಧನ ಪಾತ್ರವೂ, ಶ್ರೀ। ಐರೋಡಿ ಯಜ್ಞನಾರಾಯಣ ಉಡುಪ ವಿದ್ವಾನ್–ಇವರ ಕೃಷ್ಣನ ಭೂಮಿಕೆಯೂ, ಶ್ರೀ। ಸುಬ್ರಾಯ ಭಟ್ಟರ ಧರ್ಮರಾಯನ ಅರ್ಥವೂ ಜನಮನೋರಂಜಕವಾಗಿತ್ತು. ಬರುವ ಆದಿತ್ಯವಾರ ಇದೇ ಶಾಲೆಯಲ್ಲಿ ಪಾಂಡೇಶ್ವರ ಯಕ್ಷಗಾನ ಸಮಿತಿಯವರಿಂದ "ರಾಜಸೂಯ ಯಾಗ" ಎಂಬ ಯಕ್ಷಗಾನವು ಈ ಸಮಿತಿಯ ಸದಸ್ಯರಿಂದ ತಾಳಮದ್ದಳೆಯ ರೂಪನಾಗಿ ಅಭಿನಯಿಸಲ್ಪಡಬೇಕೆಂದೂ ನಿರ್ಣಯವಾಯಿತು.

"ನಿಯೋ ಮೈಸೂರು ಕೇಫ್"—ಬೆಂಗಳೂರು

ಬೆಂಗಳೂರು ನಗರದ ಕೆಂಪೇಗೌಡರ ರಸ್ತೆಯಲ್ಲಿನ 'ನಿಯೋ ಮೈಸೂರು ಕೆಫೆ,' ಈಚೆಗೆ ತಾನೇ ಬಹಳ ವೈಭವಯುಕ್ತವಾಗಿ ತನ್ನ ಆರಂಭೋತ್ಸವವನ್ನು ಜರುಗಿಸಿತು. ಈ ಪ್ರವೇಶೋತ್ಸವದ ಸಮಾರಂಭಕ್ಕೆಲ್ಲಾ ಲಾಮಿನಿಸ್ಟರರಾದ ಶ್ರೀ। ಎ. ವಿ. ರಮಾನಾಥನ್, ಸರಕಾರದ ಚೀಫ್ ಸೆಕ್ರೆಟರಿಗಳಾದ ಶ್ರೀ। ಬಿ. ಟಿ. ಕೇಶವ ಅಯ್ಯಂಗಾರ್ ಮೊದಲಾದ ಹಲವು ಮುಂದಿ ಪ್ರಮುಖ ಅಧಿಕಾರಿಗಳೂ, ಖಾಸಗಿ ದೊಡ್ಡ ಮನುಷ್ಯರೂ ದಯಮಾಡಿಸಿದ್ದರು. ಈ ಕೆಫೆಯ ಮಾಲಕರಾದ ಶ್ರೀ। ಕುತ್ತ್ಯತ್ತೂರು ಗುರುರಾಜಾಚಾರ್ಯರು ಅತಿಥಿಗಳನ್ನು ಸ್ವಾಗತಿಸಿ ಫಾನಫಲಾಹಾರಾದಿಗಳಿಂದ ಸತ್ಕರಿಸಿದರು.

ಶ್ರೀ। ಗುರುರಾಜಾಚಾರ್ಯರು, ಮೈಸೂರು ನಗರದಲ್ಲಿ ನಾಲ್ಕು ಫಾನ–ಭೋಜನಾಲಯಗಳನ್ನೂ, ಕೃಷ್ಣರಾಜ ಸಾಗರದಲ್ಲೊಂದು ರೆಸ್ಟೌರೆಂಟನ್ನೂ ನಡೆಸುತ್ತಿರುವರು. ಇವೆಲ್ಲವೂ ಉತ್ತಮ ರೀತಿಯ ಆಡಳಿತಕ್ಕೊಳಗಾಗಿ ಹೆಸರು ವಾಸಿಯಾಗಿರುವವು. ಈ ಫಾನ ಭೋಜನಾಲಯಗಳನ್ನು, ಹಲವು ಮಂದಿ ಆಪ್ತ ಮಹನೀಯರು ಸಂದರ್ಶಿಸಿ, ಇವುಗಳ ಕಾರ್ಯದಕ್ಷತೆ, ಸುವ್ಯವಸ್ಥೆಗಳ ಕುರಿತಾಗಿ ತಮ್ಮ ತೃಪ್ತಿಯನ್ನೂ ಆನಂದವನ್ನೂ ಸೂಚಿಸಿರುವರು. ಅಂತೇ ಈ ನೂತನ ಕೆಫೆಯೂ ಜನಾದರಕ್ಕೆ ಪಾತ್ರವಾಗಿ ಕೀರ್ತಿಗಳಿಸಲೆಂದು ಹಾರೈಕೆ.

ತಿರುವಾಂಕೂರು ಬೇಂಕ್ ಮೊಕದ್ದಮೆಯ ಖೈದಿಗಳು

ಆರೋಗ್ಯ ಜೆನ್ನಾಗಿಲ್ಲ, ತಮ್ಮಿಂದ ನಡೆದ ಅಚಾತುರ್ಯಕ್ಕಾಗಿ ವ್ಯಥೆಪಡುತ್ತೇವೆ ಎಂದು ಮುಂತಾಗಿ ಸರಕಾರದಲ್ಲಿ ಅರಿಕೆಮಾಡಿಕೊಂಡ ಮೇಲೆ, ಮೇಲ್ಕಂಡ ಬ್ಯಾಂಕಿನ ವ್ಯವಹಾರದಲ್ಲಿ ದಂಡನೆಗೆ ಗುರಿಯಾಗಿದ್ದ ಶ್ರೀ।ಗಳಾದ ಕೆ. ಸಿ. ಮಮ್ಮಿನ್ ಮಾಪಿಳ್ಳೆ ಮತ್ತು ಕೆ. ಎಂ. ಈಪನ್ ಇವರನ್ನು ಅವಧಿಗೆ ಪೂರ್ವದಲ್ಲೇ ಬಿಡುಗಡೆಮಾಡಲಾಗಿದೆ.

ವಿದ್ಯಾರ್ಥಿ ಮುಳುಗಿಹೋದ

ಮದ್ರಾಸಿನಲ್ಲಿ ಜಂಗಲರಾಯ ನ್ಯಾಯಕ್ ಟೆಕ್ನಿಕಲ್ ಸಂಸ್ಥೆಯ ವಿದ್ಯಾರ್ಥಿ ಸುಮಾರು ೨೦ ವರ್ಷದ ಡಿ. ಸುಬ್ರಹ್ಮಣ್ಯ ಎಂಬಾತನು ಟ್ರಿಪ್ಲಿಕೇನ್ ತೀರದ ಸಮಾಪದ ಸಮುದ್ರದಲ್ಲಿ ಸ್ನಾನಕ್ಕೆ ಹೋಗಿದ್ದಾಗ ಮುಳುಗಿ ಸತ.

ಪ್ರೆಸಿಡೆಂಟ್ ರುಜ್‌ವೆಲ್ಟರ ತಾಯಿ ದಿವಂಗತರಾದರು

ಅಮೆರಿಕದ ಪ್ರೆಸಿಡೆಂಟರ ತಾಯಿ ತಮ್ಮ ೮೬ನೇ ವರ್ಷ ಪ್ರಾಯದಲ್ಲಿ ದಿವಂಗತರಾದರು; ಅವರ ಮರಣ ಕಾಲದಲ್ಲಿ ಪ್ರೆಸಿಡೆಂಟರೂ ಅವರ ಪತ್ನಿಯೂ ಅವರ ಹಾಸಿಗೆಯ ಬಳಿಯಲ್ಲೇ ಇದ್ದರು.

To meet WAR TIME orders FIXED DEPOSITS IN CASH

repayable after 3, 6, 9, 12 & 24 months

at 4, 4½, 5, 6 & 7½% interest respectively (interest paid quarterly) are accepted by

CALICUT HOSIERIES, LTD.,

(ESTD. 1936) CHALAPURAM POST. (Malabar.)

List will remain open only for one month and will close immediately the required amount of Deposits are received.

Apply with 0—2—0 postage stamps for rules and application form at once to Managing Agents.

N. B. Special Rates for Deposits for sums over Rs. 5000/-

ಒಂಬತ್ತು ವರ್ಷಗಳಿಂದಿದ್ದ ಕಷ್ಟಗಳು ಒಂದು ದಿನದಲ್ಲಿ ಗುಣಹೊಂದಿದವು

"61 ವರ್ಷಗಳ ಹೆಂಗಸು ಪ್ರಾಯಸ್ತಳಾಗಿದ್ದು" ಎಲ್ಲಾ ಇರ್ವಿಂಗರ ಈಸ್ಟ್-ವೈಟ್ ಟಾನೀಕ್ ಟೇಬ್ಲಟ್‌ಗಳಿಂದ:

IRVING'S Yeast-Vite TONIC TABLETS

ಮಹನೀಯರೇ, ಒಂದು ದಿನ ಬಾಯಿ-ಹುಣ್ಣಿನ ನೋವಿನಿಂದ ಬಹಳ ಕಷ್ಟಪಡುತ್ತಿದ್ದಾಗ, ನಿಮ್ಮ ಆಡ್ವರ್‌ಟೈಸ್‌ಮೆಂಟ್‌ನ್ನು ನೋಡಿ ನನ್ನ ಯಜಮಾನರನ್ನು, ಒಂದು ಸೀಸೆ ಈಸ್ಟ್–ವೈಟ್‌ನ್ನು ಕೇವಲ ಪ್ರಯತ್ನಕ್ಕಾಗಿ ತರಿಸಿದೆನು.

ನಾನು ಒಂಬತ್ತು ವರ್ಷಗಳಿಂದ ಎಲ್ಲಾ ತರಹದ ಔಷಧಿಗಳನ್ನು ಪ್ರಯತ್ನ ಮಾಡಿದ್ದಲ್ಲದೇ, ಕಡೆಗೆ ಎಕ್ಸ್‌ರೇ ಟ್ರೀಟ್‌ಮೆಂಟನ್ನು ತೆಗೆದುಕೊಂಡೆನೆಂದರೆ ನೀವು ಬಹಳ ಆಶ್ಚರ್ಯಪಡುವಿರೆಂಬುದರಲ್ಲಿ ನನಗೆ ಯಾವ ಸಂದೇಹವೂ ಇಲ್ಲ. ನನಗೆ ಯಾವಾಗಲೂ ನೋವಿನಿಂದ ಬಹಳ ಕಷ್ಟವಾಗಿರುತ್ತಿತ್ತು ಅಲ್ಲದೆ ಕೆಲವುವೇಳೆಗಳಲ್ಲಿ ನನಗೆ ನಡಿಯುವುದಕ್ಕೂ ಆಗುತ್ತಿರಲಿಲ್ಲ. ಆದುದರಿಂದ ನಿಮ್ಮ ಆಶ್ಚರ್ಯಕರವಾದ ಈಸ್ಟ್–ವೈಟ್ ಟೇಬ್ಲಟ್‌ಗಳಿಗಾಗಿ ನಿಮಗೆ ನನ್ನ ವಂದನೆಗಳನ್ನು ಅರ್ಪಿಸುತ್ತೇನೆ. ಒಂದು ದಿನದ ಟೇಬ್ಲಟ್‌ಗಳನ್ನು ತೆಗೆದುಕೊಂಡಿದ್ದರಿಂದಲೇ ನನಗೆ ದೇಹದಲ್ಲಿನ ನೋವು ಕಡಿಮೆಯಾಗುತ್ತ ಬಂದಿತು, ಮತ್ತು ಈಗ ನನಗೆ ಯಾವ ತರಹ ನೋವುಗಳೂ ಇಲ್ಲದೆ ಇರುವುದಲ್ಲದೆ, ನಾನು ಒಬ್ಬ ಹೊಸ ಮನುಷ್ಯಳಾಗಿದ್ದೇನೆ. ನನ್ನ ವಯಸ್ಸು 61.

ಈ ಟೇಬ್ಲಟ್‌ಗಳ ವಿಚಾರವನ್ನು, ನಿದ್ರೆಯಿಲ್ಲದೆ ಕಷ್ಟಪಡುತ್ತಿದ್ದ ನನ್ನ ನೆರೆಯವರಿಗೆ ತಿಳಿಸಿದೆನು ಆಕೆಯು ಅವುಗಳನ್ನು ಸೇವಿಸಿದ್ದರಿಂದ ಆಕೆಗೂ ಬಹುಮಟ್ಟಿಗೆ ಗುಣಮಾಡಿದೆ ನಾನು ಈಗ ಯಾವಾಗಲೂ ಈ ಟೇಬ್ಲಟ್‌ಗಳಿಲ್ಲದೇ ಇರುವುದೇ ಇಲ್ಲ, ಮತ್ತು ಯಾರಾದರೂ ಕಷ್ಟಪಡುತ್ತಿದ್ದರೆ ಈಸ್ಟ್–ವೈಟನ್ನು ಉಪಯೋಗಮಾಡುವುದಕ್ಕೆ ಬಹಳ ಸಂತೋಷದಿಂದ ಹೇಳುತ್ತೇನೆ.

ಇತಿ, ಎಮ್. ಎಸ್.

ಕಾಲಿನಲ್ಲಿ ರೂಮೇಟಿಸಂ–74 ವರ್ಷ ವಯಸ್ಸಿನವರು ಈಗ ನೋವಿಲ್ಲದೆ ನಡಿಯುತ್ತಾರೆ.

ಮಹನೀಯರೇ,

ನಿಮ್ಮ ಸೊಗಸಾದ ಈಸ್ಟ್–ವೈಟ್‌ನಿಂದ ನನಗೆ ಗುಣವಾಗಿದ್ದಕ್ಕಾಗಿ, ನಿಮಗೆ ನನ್ನ ವಂದನೆಗಳೊಡನೆ ಈ ಪತ್ರವನ್ನು ಕಳುಹಿಸಿರುತ್ತೇನೆ. ನನಗೆ ಕಾಲಿನಲ್ಲಿ ರೂಮೇಟಿಸಂ ಇದ್ದಿತು. ನಿಮ್ಮ ಆಡ್ವರ್‌ಟೈಸ್‌ಮೆಂಟನ್ನು ನೋಡಿ ಒಂದು ಬಾಟಲ್ ಈಸ್ಟ್–ವೈಟ್‌ನ್ನು ತರಿಸಿದೆನು ಗುಣ ಕಂಡಿದ್ದರಿಂದ ಇನ್ನೂ 6 ಬಾಟಲ್‌ಗಳನ್ನು ಸೇವಿಸಿದೆನು. ಮತ್ತೂ ನನಗೆ ಈಗ ಯಾವ ತರಹದ ನೋವೂ ಇಲ್ಲದೆ ನನಗೆ ಎಲ್ಲಾ ವಿಧಗಳಲ್ಲಿಯೂ ಗುಣವಾಗಿದೆ. 74 ವರ್ಷ ವಯಸ್ಸಾದ ನನಗೆ, ಇದು ಬಹು ಆಶ್ಚರ್ಯಕರವಾಗಿದೆ. ಎಲ್ಲಾ ಸಮಯಗಳಲ್ಲೂ ಈಸ್ಟ್–ವೈಟನ್ನು ಎಲ್ಲರಿಗೂ ಶಿಫಾರ್ಸಿಸುತ್ತೇನೆ. ಪುನರ್ವಂದನೆಗಳು–ಇತಿ ಆರ್. ಡಿ.

ಇದರ ರಹಸ್ಯ

ಯೀಸ್ಟ್–ವೈಟ್‌ನ ಅಪಾರ ಶಕ್ತಿಯ ರಹಸ್ಯವೇನೆಂದರೆ ಅದು ವೈಟಾಮಿನ್ 'ಬಿ' ತುಂಬಿರುವ ಸ್ವಚ್ಛವಾದ ಔಷಧಯುಕ್ತ ಯೀಸ್ಟ್ ಮತ್ತು ಇತರ ಅಮೂಲ್ಯ ಶಕ್ತಿವರ್ಧಕ ಔಷಧಗಳು ಪ್ರಾಮುಖ್ಯವೈದ್ಯರು ಹೇಳಿದಂತೆ ಶಾಸ್ತ್ರರೀತಿಯಲ್ಲಿ ಬಹಳ ಜಾಗರೂಕತೆಯಿಂದ ಬೆರಸಲ್ಪಟ್ಟು ತಯಾರಾಗಿದೆ. ಯೀಸ್ಟ್–ವೈಟ್ ಅತಿ ತೀವ್ರವಾಗಿ ಫಲಿಸುವ ಶಕ್ತಿವರ್ಧಕ ಔಷಧ.

ಗುಣವಿಲ್ಲವೋ–ದುಡ್ಡು ಬೇಡ

ಪ್ರಪಂಚದಲ್ಲೆಲ್ಲಾ ಹೆಸರುವಾಸಿಯಾದ ನಮ್ಮ "ಗುಣವಿಲ್ಲವೋ–ದುಡ್ಡು ಬೇಡ"ಯೆನ್ನುವ ಯೋಜನೆಯನ್ನು ಯಾವಾಗಲಾದರೂ ಪರೀಕ್ಷಿಸಿದ್ದೀರಾ? ನೀವು ಬಳಲಿ ಬೆಂಡಾಗಿದ್ದರೂ, ತಲೆನೋವಿನಿಂದ ನರಳುತ್ತಿದ್ದರೂ, ವಾತಗ್ರಸ್ತರಾಗಿದ್ದರೂ, ಅಥವಾ ಯಾವ ಕಾರಣದಿಂದಲಾದರೂ ಸರಿಯೇ ನಿರುತ್ಸಾಹಿಗಳಾಗಿದ್ದರೂ, ಔಷಧ ವ್ಯಾಪಾರಿಯಿಂದಲೋ ಅಥವಾ ಸ್ಟೋರಿನಿಂದಲೋ ಒಂದು ಶೀಸೆ ಇರ್ವಿಂಗ್ಸ್ ಯೀಸ್ಟ್–ವೈಟ್ ಟೇಬ್ಲಟ್‌ಗಳನ್ನು ತರಿಸಿಟ್ಟುಕೊಳ್ಳಿ. ನಿಷ್ಪ್ರಯತ್ನರೀತಿಯಲ್ಲಿ ಸೇವಿಸಿರಿ. ನೀವು ಪೂರ್ಣ ತೃಪ್ತಿ ಹೊಂದದಿದ್ದರೆ ಖಾಲೀ ಪ್ಯಾಕೇಟನ್ನು "ಗ್ಯಾರೆಂಟೆ ಸೀಲ್" ನೊಡನೆ ನಮಗೆ ಕಳುಹಿಸಿ. ನಿಮ್ಮ ಹಣವು ನಿಮಗೆ ಪೂರಾ ವಾಪಾಸುಮಾಡಲ್ಪಡುವುದು. ಎಲ್ಲಾ ಔಷಧ ವ್ಯಾಪಾರಿಗಳಲ್ಲಿಯೂ ಮತ್ತು ಸ್ಟೋರ್‌ಗಳಲ್ಲಿಯೂ ಇರ್ವಿಂಗ್ಸ್ ಯೀಸ್ಟ್–ವೈಟ್ ಟೇಬ್ಲಟ್‌ಗಳು ದೊರೆಯುವುವು.

ಸೇಲ್ ಮ್ಯಾನುಫಾಕ್ಚರರ್ಸ್:

ಇರ್ವಿಂಗ್ಸ್ ಯೀಸ್ಟ್–ವೈಟ್ ಲಿಮಿಟೆಡ್,

ವಾಟ್‌ಫರ್ಡ್, ಇಂಗ್ಲೆಂಡ್.

ವಾರ್ತಾಗುಚ್ಛ

ಜರ್ಮನ್ ರೇಡಿಯೋವಿನ ಗ್ರಹಚಾರ

ಜರ್ಮನ್ ರೇಡಿಯೋವಿನ ಮಾತುಗಳು ಕೇಳದಂತೆ, ಯಾರೋ ಪ್ರಯತ್ನಿಸುತ್ತಿರುವರು. ಜರ್ಮನ್ ರೇಡಿಯೋವಿನ ವಾರ್ತೆಗಳಿಗೆ ಉತ್ತರ ಹೇಳುತ್ತಿರುವರು. ಆ ಉತ್ತರಗಳ ಮಾದರಿಗಳು ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಅದರಲ್ಲಿ ಕೆಲವು ಹೀಗಿವೆ. "ಜರ್ಮನರ ಹೊಸ ವಿಜಯ . . . " ಉತ್ತರ:— "ಸ್ಮಶಾನ ಭೂಮಿಯಲ್ಲೆ"; "ಜರ್ಮನರ ಬಾಂಬರುಗಳು ಕಳೆದ ರಾತ್ರಿ ದಾಳಿಗೆ ಹೊರಟಿದ್ದುವು"; ಉತ್ತರ:- "ಜರ್ಮನಿಯಲ್ಲಿ ಇನ್ನೂ ಬಾಂಬರುಗಳು ಉಳಿದಿವೆಯೇ?" "ಫ್ಯೂರಾರಿನ ಹೆಡ್‌ಕ್ವಾಟರ್ಸ್ ಪ್ರಕಟಿಸುತ್ತಿದೆ . . . " ಉತ್ತರ:- "ಬರೇ ಸುಳ್ಳು ಸುದ್ದಿಗಳನ್ನೇ".

ರಷ್ಯಕ್ಕೆ ಅಮೆರಿಕದ ಎಣ್ಣೆ

ರಷ್ಯಕ್ಕೆ ಎಣ್ಣೆ ತುಂಬಿದ ಒಂದು ಹಡಗನ್ನು ಅಮೆರಿಕದಿಂದ ಕಳುಹಿಸಲಾಗಿದ್ದು ಅದೀಗ ಸುರಕ್ಷಿತವಾಗಿ ವ್ಲಾಡಿವೋಸ್ಟಾಕಿಗೆ ಬಂದು ತಲುಪಿದೆ.

ಕೆಥಲಿಕ್ ಆರ್ಚ್

ಬಿಶಪರಿಗೆ ಜುಲ್ಮಾನೆ

ಜರ್ಮನ್ ಪೋಲೀಸ್ ಅಧಿಕಾರಿಯ ಅಪ್ಪಣೆಯನ್ನು ಮನ್ನಿಸಲಿಲ್ಲವೆಂದು ನರ್‌ಲ್ಯಾಂಡ್ಸಿನ ಕೆಥೊಲಿಕ್ ಆರ್ಚ್ ಶೋಪರಾದ ಮೊನ್ಸಿನ್ಯೂರ್ ಜೋಂರಿಗೆ ನಾಜಿಗಳು ೫೦೦ ಗಿಲ್ಡರ್ ಜುಲ್ಮಾನೆ ವಿಧಿಸಿದ್ದಾರೆ.

ಬ್ಬನ ವಧೆಗೆ ೫೦ ಮಂದಿಯ ತಲೆ!

ಬೆಲ್‌ಗ್ರೇಡಿನ ಬೀದಿಗಳಲ್ಲಿ ಒಬ್ಬ ಕಮ್ಯುನಿಸ್ಟ್", ಒಬ್ಬ ಜರ್ಮನ್ ಸೋಲ್ಜರನನ್ನು ಕೊಲೆಮಾಡಿದನೆಂದು ರ್ಯದ ೫೦ ಮಂದಿ "ಕಮ್ಯುನಿಸ್ಟ್"ನ್ನು ನಾಜಿಗಳು ಗುಂಡುಹಾಕಿ ವಧಿಸಿರು.

ಗ್ರಾಮೋದ್ಧಾರ ಕಾರ್ಯಗಳು

ಮದ್ರಾಸ್ ಆಧಿಪತ್ಯದ ಗ್ರಾಮೋದ್ಧಾರ ಕಾರ್ಯಗಳಿಗಾಗಿ ಜಿಲ್ಲಾ ಕಲೆಕ್ಟರುಗಳು ಗವರ್ನ್‌ಮೆಂಟ್ ಆಫ್ ಇಂಡಿಯದ ಗ್ರಾಂಟು ಮತ್ತು ಸ್ಥಳೀಯ ವಂತಿಗೆಗಳಿಂದ ೧೯೩೭ನೇ ಜೂನ್ ೩೦ರಿಂದ ೧೯೪೦ನೇ ಜೂನ್ ೩೦ರ ವರೆಗೆ ರೂ. ೩,೨೦,೧೮೫ ರೂಪಾಯಿಗಳನ್ನು ವೆಚ್ಚ ಮಾಡಿರುವರೆಂದು ತಿಳಿದುಬಂದಿದೆ.

ಆಕಾಶಮಂಡಲದ ರಕ್ಷಣಾ ಸಾಧನೆಗಳು

ಪಶ್ಚಿಮೋತ್ತರ ಇಂಡಿಯದ ಆಕಾಶಮಂಡಲದ ರಕ್ಷಣಾ ಅಭ್ಯಾಸಗಳು, ಕ್ಕಷ್ಟು ದೊಡ್ಡ ಪ್ರಮಾಣದಲ್ಲಿ ಅಕ್ಟೋಬರದ ಎರಡನೇ ವಾರದಲ್ಲಿ ನಡೆಯುವಂತೆ ಏರ್ಪಾಡಾಗಿದೆ.

ವಿದ್ಯಾರ್ಥಿನಿಯ ಮೇಲೆ ನಿರ್ಬಂಧದ ಅಪ್ಪಣೆ

ವಿಶಾಖಪಟ್ಟಣದ ಆಂಧ್ರ ಮೆಡಿಕಲ್ ಕಾಲೇಜಿನ ವಿದ್ಯಾರ್ಥಿನಿ ಶ್ರೀಮತಿ ಲಕ್ಷ್ಮಿ ಎಂಬಾಕೆ ರಾಜದ್ರೋಹಾಸಕ್ತಳಾದ ಮನೋವೃತ್ತಿಯುಳ್ಳವಳೆಂಬ ಕಾರಣದಿಂದ ಅವಳು ವಿಶಾಖಪಟ್ಟಣವನ್ನು ಬಿಟ್ಟು ಮಸಲಿಪಟಾಮಿನ ಆಕೆಯ ತಂದೆಯ ಮನೆಯಲ್ಲಿ ವಾಸಿಸಬೇಕೆಂದು ಸರಕಾರದ ಅಪ್ಪಣೆಯಾಗಿದೆ.

"ಮಹಾ ಯುದ್ಧದ ಎರಡನೇ ವಾರ್ಷಿಕ ದಿನಾಚರಣೆ"— ಧರ್ಮಸ್ಥಳ

"ಧರ್ಮಸ್ಥಳ ಶ್ರೀ। ಮಂಜಯ್ಯ ಹೆಗ್ಗಡೆಯವರ ಶಾಲೆಯ ಸಂಸ್ಥೆಯ ಆಶ್ರಯದಲ್ಲಿ, ಯುಕ್ತವಾದ ರೀತಿಯಲ್ಲಿ, ಈ ದಿನಾಚರಣೆಯು ಮೈಸೂರು ಸಂಸ್ಥಾನದ ಪ್ರಜಾಪ್ರತಿನಿಧಿ ಸಭೆಯ ಮಾಜಿ ಸದಸ್ಯರಾದ ಶ್ರೀ। ಶ್ರಿಂಗೇರಿ, ಸಿ. ಪದ್ಮರಾಜಯ್ಯನವರ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ಜರುಗಿತು. ಅಂದು ಸಾರ್ವಜನಿಕ ಸಭೆಯು ಇದಕ್ಕಾಗಿ ಜರುಗಿಸಲಾಯಿತು. ಅನೇಕರಿಂದ ಹಿಂದುಸ್ಥಾನದಲ್ಲಿ ಬ್ರಿಟಿಷರ ಆಳ್ವಿಕೆಯ ಶ್ರೇಷ್ಠತೆಯ ವಿಷಯದಲ್ಲಿ, ಭಾಷಣಗಳು ನಡೆದುವು; ಮತ್ತು ಈಗಿನ ಯುದ್ಧದಲ್ಲಿ, ನಮ್ಮ ಬ್ರಿಟಿಷರಿಗೆ ಬೇಗನೇ ಸಂಪೂರ್ಣ ಜಯ ಲಾಭವಾಗಿ ಎಲ್ಲರಿಗೂ ಸುಖಸಿಕ್ಕುವಂತೆ ಪ್ರಾರ್ಥನೆ ಮಾಡೋಣಾದ ಬಳಿಕ, ಶಾಲಾ ಮಕ್ಕಳಿಗೆ ಮಿಠಾಯಿ ವಗೈರೆ ಹಂಚಲಾಯಿತು. ಅನಂತರ ಭಾಷಣ ಕರ್ತರಿಗೂ, ಅಧ್ಯಕ್ಷ ಮಹಾಶಯರಿಗೂ ಶಾಲಾ ಹೆಡ್‌ಮಾಸ್ಟರರು ಅಭಿವಂದನೆಗಳನ್ನು ಸಲ್ಲಿಸಿ, ಸಭೆ ಮುಕ್ತಾಯವಾಯಿತು.

ಬಿಹಾರಿನಲ್ಲಿ

ಬಿಹಾರಿನ ಸ್ಥಳೀಯ ಸಂಸ್ಥೆಗಳಲ್ಲಿನ ಕಾಂಗ್ರೆಸ್ ಪಾರ್ಟಿಯ ಯಾವತ್ತು ಸದಸ್ಯರೂ ತಮ್ಮ ಸ್ಥಾನಗಳಿಗೆ ರಾಜಿಕೊಡಬೇಕೆಂದು ಡಾ. ರಾಜೇಂದ್ರ ಪ್ರಸಾದರವರು ತಿಳಿಸಿರುತ್ತಾರೆ.



ಮೈಸೂರು ಸಂಸ್ಥಾನದ ಸುದ್ದಿಗಳು

ಬೆಂಗಳೂರು.
[ಸ್ವಂತ ಸುದ್ದಿಗಾರರಿಂದ]

ಇಬ್ಬರು ಕನ್ನಡಿಗರ ಭಾವಚಿತ್ರ ಅನಾವರಣ

ಸರ್ ಮಿರ್ಜಾ ಎಂ. ಇಸ್ಮಾಯಿಲ್ ರವರ ಮತ್ತು ಶ್ರೀ। ಆಲೂರು ವೆಂಕಟ ರಾಯರ ಭಾವಚಿತ್ರಗಳನ್ನು ದಿವಾನ ರಾದ ರಾಜಮಂತ್ರ ಪ್ರವೀಣ ಎನ್. ಮಾಧವರಾಯರು, ಕನ್ನಡ ಸಾಹಿತ್ಯ ಪರಿಷತ್ಮಂದಿರದಲ್ಲಿ ಅನಾವರಣ ಮಾಡಿ ದರು. ಸಭಾಧ್ಯಕ್ಷತೆಯನ್ನು ಸ್ಥಳೀಯ ಸಂಸ್ಥೆಗಳ ಮತ್ತು ಸಾರ್ವಜನಿಕ ಆರೋ ಗ್ಯದ ಮಂತ್ರಿಗಳಾದ ಶ್ರೀ। ಹೆಚ್. ಬಿ. ಗುಂಡಪ್ಪ ಗೌಡರು ವಹಿಸಿದ್ದರು.

ಪರಿಷತ್ತಿಗೆ ಒಂದಾದರೊಂದು ರೀತಿ ಯಲ್ಲಿ ಸೇವೆ ಮಾಡಿ, ಆದರ ಪ್ರಗತಿಗೆ ಕಾರಣವಾಗಿರುವವರ ಭಾವಚಿತ್ರಗಳು ಪರಿಷತ್ತಿನಲ್ಲಿ ಪ್ರಾತಿನಿಧ್ಯ ರೂಪದಲ್ಲಿದ್ದು ಅದರ ಕೆಲಸಗಾರರಿಗೆ ಸ್ಫೂರ್ತಿಯನ್ನು ಕೊಡುವುದು ಆಶಿಸತಕ್ಕುದಾಗಿದೆ ಯೆಂದು ಪರಿಷತ್ತಿನ ಉಪಾಧ್ಯಕ್ಷರಾದ ರಾಜಸೇವಾಸಕ್ತ ಬಿ. ಎಂ. ಶ್ರೀ। ಕಂಠಯ್ಯ ನವರು ಹೇಳಿದರು.

ಡಾ। ಟಾಗೂರರ ಭಾವಚಿತ್ರ ಅನಾವರಣ

ಮೇಡಂ ಸೋಫಿಯಾ ವಾಡಿಯಾ ರವರ ಭಾಷಣ

ಡಾ। ರವೀಂದ್ರನಾಥ ಟಾಗೂರರ ಸ್ಮಾರಕ ದಿನವನ್ನು ಬೆಂಗಳೂರು ಇಂಟರ್ ಮೆಡಿಯೇಟ್ ಕಾಲೇಜ್ ಸಂಘವು ಆಚ ರಿಸಿತು. ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದ ಮೇಡಂ ಸೋಫಿಯಾ ವಾಡಿ ಯಾರವರು ಕವೀಂದ್ರರ ಭಾವಚಿತ್ರ ವನ್ನು ಅನಾವರಣ ಮಾಡಿದರು.

ಶ್ರೀ। ಮಾಸ್ತಿ ವೆಂಕಟೇಶಯ್ಯಂಗಾ ರ್ಯರು ಡಾ। ಟಾಗೂರರ ವಿಷಯವಾಗಿ ಉಪನ್ಯಾಸ ಮಾಡಿದರು, "ಡಾ। ಟಾಗೂ ರರು ಸತ್ಯ ಮತ್ತು ಕರ್ತವ್ಯವನ್ನು ಎತ್ತಿ ತೋರಿಸುವ ಜ್ಯೋತಿ; ಅವರ ಸಶ್ಚರ ದೇಹ ಹೋಗಿದೆಯಾದರೂ, ಅವರ ಜ್ಯೋತಿಯು ಸದಾ ಭಾರತದ ಮುಂ ದೆಯೇ ಅಲ್ಲದೆ ಪ್ರಪಂಚದ ಮುಂದೆ ಚಿರ ವಾಗಿ ಪ್ರಕಾಶವಾಗಿರುವುದು. ಅವರ ಮಾರ್ಗದರ್ಶನವು ಭಾರತೀಯರಿಗೇ ಅಲ್ಲದೆ ಪ್ರಪಂಚಕ್ಕೆ ಇನ್ನೂ ಬೇಕಾಗಿತ್ತು. ನಮ್ಮ ದೇಶದ ರಾಷ್ಟ್ರೀಯತೆಯನ್ನು ಪುನ ರುತ್ಥಾನಗೊಳಿಸಿದ ಕೀರ್ತಿಯು ಡಾ। ಟಾಗೂರರಿಗೆ ಸಲ್ಲುತ್ತದೆ. ಡಾ। ಟಾಗೂ ರರು ಮಾನವ ಸೇವೆಯಲ್ಲಿಯೇ ತಮ್ಮ ದೇಶವನ್ನು ಸವೆದರು. ಭಾರತದ ಸಂ ದೇಶವನ್ನು ಪ್ರಪಂಚದಲ್ಲಿ ಪ್ರಜ್ವರಪಡಿ ಸಿದ ಸ್ವಾಮಿ ವಿವೇಕಾನಂದರ ಕಾರ್ಯ ವನ್ನು ಮುಂದುವರಿಸಿದ ಕೀರ್ತಿಯು ಇವರದು. ಅವರು ಮಾನವರೆಲ್ಲರಿಗೂ ಒಂದೇ ಮತವೆಂಬುದನ್ನು ಎಂದರೆ ಸೇವೆಯೇ ಮತವೆಂಬುದನ್ನು ತಮ್ಮ ಜೀವಿತದಲ್ಲಿ ತೋರಿಸಿ ಕೊಟ್ಟಿರುವರು. ಅವರಹಿತವಾದವನ್ನು ಅನುಸರಿಸಿ ಸೇವೆ ಸಲ್ಲಿಸೋಣ" ಎಂದು ಶ್ರೀ। ಮಾಸ್ತಿ ಯವರು ಹೇಳಿದರು.

"ಅಜನ್ಮ ಆಶಾವಾದಿ"

ಮೇಡಂ ಸೋಫಿಯಾ ವಾಡಿಯಾ ರವರು, ಡಾ। ಕವೀಂದ್ರರ ಭಾವಚಿತ್ರ ವನ್ನು ಅನಾವರಣ ಮಾಡಿ ಡಾ। ಟಾಗೂ ರರು ತಮ್ಮ ಲಂನೇ ವರ್ಷದ ವಯಸ್ಸಿ ನಲ್ಲಿ ಕೊಟ್ಟ ಅದ್ಭುತ ಸಂದೇಶದಲ್ಲಿ ಪ್ರಪಂಚದಲ್ಲಿ ಕಲ್ಪನೆಗಳಿಗೆ ಕಾರಣರಾದ ವರನ್ನು ಖಂಡಿಸಿ, ಜನರಿಗೆ ಧೈರ್ಯವಾಗಿ ಸತ್ಯವನ್ನು ಎತ್ತಿ ಹಿಡಿಯಿರಿ, ಒಳ್ಳೆಯ ದಾಗುವುದು ಎಂದು ಘೋಷಿಸಿದರು. ಅವರ ಸಂದೇಶವು ಸರ್ವ ಕಾಲಕ್ಕೂ ಯೋಗ್ಯವಾದುದು. ಅವರನ್ನು ಅನು ಸರಿಸಲು ಸರ್ವರೂ ಪ್ರಯತ್ನಿಸಿ ಮೇಲ್ಮೆ ಹೊಂದಲೆಂದು ಆಶಿಸಿದರು.

ಪ್ರಭುಗಳ ಭಾವಚಿತ್ರ ಅನಾವರಣೋತ್ಸವ

ಮೈಸೂರು ಸಂಸ್ಥಾನದ ವಿದ್ಯಾ ಮಂತ್ರಿಗಳಾದ ಮಿ। ಜಿ. ಮಹಮ್ಮದ್ ಇಮಾಂರವರು, ಚಾಮರಾಜ ಪೇಟ್ ಕ್ಲಬ್ಬಿನಲ್ಲಿ, ಆಳುವ ಮಹಾ ಸ್ವಾಮಿಯ ವರಾದ ಶ್ರೀಮಜ್ಜಯಚಾಮರಾಜ ಒಡೆಯರ್‌ರವರ ಭಾವಚಿತ್ರ ಅನಾವರ ಣೋತ್ಸವ ಮಾಡಿದರು. ಕ್ಲಬ್ಬಿನ ಅಧ್ಯಕ್ಷ ರಾದ ಶ್ರೀ। ಸಿ. ಎನ್. ನರಸಿಂಗರಾಯರು ಅಧ್ಯಕ್ಷತೆ ವಹಿಸಿದ್ದರು. ಕ್ಲಬ್ಬಿನ ಕಾರ್ಯ ದರ್ಶಿಯವರಾದ ಶ್ರೀ। ಆರ್. ಎಸ್. ನಾರಾಯಣರಾಯರು ಸ್ವಾಗತ ಭಾಷಣ ಮಾಡಿದರು.

ಸರ್ ಸಿಕಂದರರ ರಾಜೀನಾಮೆ

ಸರ್ ಸಿಕಂದರ್ ಹಯಾತ್ ಖಾನರು ಡಿಫೆನ್ಸ್ ಕೌನ್ಸಿಲಿನ ತಮ್ಮ ಸದಸ್ಯತನಕ್ಕೆ ತಾವೇಕೆ ರಾಜೀಕೊಟ್ಟೆ ವೆಂಬುದನ್ನು ವಿವರಿಸಿದ್ದಾರೆ. ಆ ಕೌನ್ಸಿ ಲಿನಲ್ಲಿ ತಾವು ಪುಜಾಬಿನ ಪ್ರಧಾನರಾಗಿ ಕಾರ್ಯ ನಡೆಸಲು ಒಪ್ಪಿದುದು ನಿಜವಾ ದರೂ, ಆ ಕೌನ್ಸಿಲಿನಲ್ಲಿ ತಮ್ಮನ್ನು ಪುಜಾಬದ ಪ್ರಧಾನರ ನೆಲೆಯಲ್ಲಿ ಸೇರಿಸಿ ಕೊಂಡಿಲ್ಲವೆಂಬುದನ್ನು ತಿಳಿದಾಗ, ತಾವು ಅಲ್ಲಿ ಮತ್ತೂ ಇರುವುದರಿಂದ ಮುಸ್ಲಿಮ್ ಲೀಗಿಗೆ ಘೋರ ಅನ್ಯಾಯಮಾಡಿದಂತಾ ಗುವುದೆಂದು ಭಾವಿಸಿ ಈ ರಾಜೀನಾಮೆಗೆ ಕಾರಣವಾಯಿತೆಂದು ಶ್ರುತಪಡಿಸಿದ್ದಾರೆ.

ನೋಟೀಸು

ದ. ಕ. ಮಂಗಳೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ.

ಕ್ರಮ ಅಮ್ಲ ಜ್ಯಾರಿ ನಂಬ್ರ 62/1941.
ಕ್ರಮ ನಂಬ್ರ 155/1933.

ಕಿಟ್ಟಪ್ಪ ಚೌಟ— **ಅರ್ಜಿದಾರ.**

ಮತ್ತು

1. ಹಾಮದು ಬ್ಯಾರಿ, 2. ಬಾಪ ಕುಂಞಿ ಬ್ಯಾರಿ, 3. ಕುಂಞಿ ಪಾತುಂಮ, 4. ಇಬ್ರಾಯಿ—ಮಮುಂಞಿ ಬ್ಯಾರಿ ಮಕ್ಕಳು, ಮಂಗಳೂರು ತಾಲೂಕು, ಈರಾ ಗ್ರಾಮ— **ರೆಸ್ಪೊಂಡೆಂಟರು.**

ಮೇಲೆ ಹೆಸರು ಕಾಣಿಸಿದ ರೆಸ್ಪೊಂ ಡೆಂಟರೀಗೆ—

ಅರ್ಜಿದಾರ ಮೇಲಿನ ಅಮ್ಲಜ್ಯಾರಿ ಯಲ್ಲಿ ಜಪ್ತಿ ಮಾಡಿಸಿದ ಸ್ಥಿರಾಸ್ತಿಯ ಏಲಂ ಇಸ್ತಿಹಾರಿನ ಶರತುಗಳನ್ನು ನಿರ್ಣಯಿಸುವರಿತಾ. 18—9—1941 ಎಂತ ನಿಶ್ಚಯಿಸಲ್ಪಟ್ಟಿರುತ್ತದೆ ಎಂತ ನಿಮಗೆ ಇದರಿಂದ ತಿಳಿಸೋಣಾಗುತ್ತದೆ. ರೆಸ್ಪೊಂಡೆಂಟರೀಗೆ ಆಕ್ಷೇಪವಿದ್ರೆ ಸದ್ರಿ ತಾರೀಕಿನ ಬೆಳಿಗ್ಗೆ 10½ ಗಂಟೆಗೆ ಮೇ ಲಿನ ಕೋರ್ಟು ಮುಂದೆ ಹಾಜರಾಗಿ ಜಾಹೀರುಪಡಿಸಿಕೊಳ್ಳಬಹುದು.

ಕೋರ್ಟು ಹುಕ್ಕುಂ ಪ್ರಕಾರ

B. R. Vyasraya Achar,
ಅರ್ಜಿದಾರನ ಕಡೆ ಎಡ್ವಕೇಟ್.

ಮಂಗಳೂರು, ತಾ. 29—8—41.

LIFE INSURANCE

Is the one investment which in peace or war knows no depreciation. It is the only scientific means which plans with prudence and certainty against the hazards of unknown tomorrow.

EVERY PREMIUM PAID ON YOUR INSURANCE IS A STONE LAID FOR YOUR FINANCIAL WELL-BEING. YOUR INSURANCE POLICY MAKES YOU CONSCIOUS THAT YOU & YOUR DEAR ONES ARE PROTECTED AND PROVIDED FOR THE FUTURE.

Let "Popular", the successful and progressive life office of your own district, plan your future.

THE POPULAR INSURANCE CO., LTD.,
Head Office: **MANGALORE, S. I.**

ನವೀನ ಬಾಗಿಧ ಸ್ಯಾಂಡೊ

ನೋಡಿರೀ



ಸಹಜಸಿದ್ಧವಾದ ಹೊಂದಿಕೆಯು ಮಣಿಕಟ್ಟಿನ ಸುಖವನ್ನು ದೃಢೀಕರಿಸುತ್ತದೆ

ಈ ನವೀನ ಸ್ಯಾಂಡೋವಿನ ವಿಶೇಷ-ಆಕಾರದ ಬಾಗಿದ ಹಿಂಭಾಗವು ಧರಿಸುವಿಕೆಯಲ್ಲಿ ನೀವು ಹಿಂದೆಂದೂ ಅರಿ ತಿರದ ಸುಖವನ್ನು ಕೊಡುತ್ತದೆ. ಮಣಿಕಟ್ಟಿನ್ನು ಎಷ್ಟು ಅಚ್ಚು ಗಟ್ಟಾಗಿ ಅದು ಹೊಂದಿಕೊಳ್ಳುತ್ತದೆಂದು ನೋಡಿ! ನಿಮಗೆ ಅತ್ಯಂತ ಸಮೀಪದಲ್ಲಿರುವ ಫೇವರ್-ಲ್ಯೂಬಾ ಸ್ವಾಕಿಸ್ಟರುಗಳಲ್ಲಿ ಅವನ್ನೀಗಲೇ ನೋಡಿಬಿಡಿ, ಯಾ ಟಪ್ಪಾಲುದ್ವಾರಾ ನಮ್ಮ ಯಾವದಾದರೂ ಡಿಪೊ ದಿಂದ ನೇರವಾಗಿ ತರಿಸಿ. ಅರೇಬಿಕ್ ಯಾ ಸೆಮಿ-ಇಂಡೆಕ್ಸ್ ಮತ್ತು ರೇಡಿಯಂ ಡಾಯಲುಗಳಿಂದ ನೀವು ಆರಿಸಬಹುದು.

ಫೇವರ್-ಲ್ಯೂಬಾದವರಿಗೆ, ಒಪ್ಪಿಸಲ್ಪಡುವ ಪ್ರತಿಯೊಂದು ರಿಪೇರಿ ಕೆಲಸವೂ ಸ್ವಿಸ್ ನಿಪುಣರ ಮೇಲ್ವಿಚಾರಕ್ಕೊಳಗಾಗುತ್ತದೆ.



ಬೆಲೆಗಳು:

ಸಂ೨೧೧ ರೊ. ಗೊ. ರೂ. ೫೦. ಸಂ೧೭೩ ಸ್ಟೇಬ್ರೈಟ್ ಸ್ಟೀಲ್ ರೂ. ೪೨
ಸಂ೧೫೯ ಕ್ಯಾರೆಟ್ ಸೊಲಿಡ್ ಭಂಗಾರ ... ರೂ. ೯೫
ಸಂ೧೬೯ ಕ್ಯಾರೆಟ್ ಭಂಗಾರದ ಮುಂಭಾಗ & ಸ್ಟೇಬ್ರೈಟ್ ಹಿಂಭಾಗ ರೂ. ೬೮
ಸಂ೧೯ ನಿಕಲ್ .... ರೂ. ೩೬

Favre-Leuba & Co LIMITED
BOMBAY CALCUTTA RANGOON

ಟಪ್ಪಾಲು ದ್ವಾರಾ ಆರ್ಡರು

ನೀವು ಪರಸ್ಥಳಗಳಲ್ಲಿ ವಾಸಮಾಡುತ್ತಿರುವಿರಾದರೆ ಮಂಜೂರಾತಿ ಗಾಗಿ ವಿ. ಪಿ. ಪಿ. ದ್ವಾರಾ ಸಾಮಾನುಗಳನ್ನು ತರಿಸಬಹುದು. ಮುಟ್ಟಿದ ೩ ದಿನಗಳೊಳಗಾಗಿ ಉಚಿತ ಸ್ಥಿತಿಯಲ್ಲಿ ಹಿಂದಕ್ಕೆ ಕಳುಹಿದ ಮ್ಹಾಲಿನ ಕ್ರಯವನ್ನು ಪೋಸ್ಟೇಜು ಮತ್ತು ಮನಿ ಆರ್ಡರ್ ಕಮಿ ಶನ್ ಕಳೆದು ಪರತ ಕೊಡಲಾಗುವುದು.

Edited and Published by B. Vittal Rau at the Kanteerava Office, Maidan North Road, Mangalore
Printed by M. Baburaya Prabhu, B. A., at the Mangalore Press, Car Street, Mangalore